**ಕೆಎಎಸ್ ಪೂರ್ವಭಾವಿ ಪರೀಕ್ಷೆ ಪಠ್ಯಕ್ರಮ**

★ ಪೂರ್ವಭಾವಿ ಪರೀಕ್ಷೆಯು ಎರಡು ಕಡ್ಡಾಯ ಪತ್ರಿಕೆಗಳನ್ನು ಹೊಂದಿದ್ದು ಬಹು ಆಯ್ಕೆ ಪ್ರಶ್ನೆಗಳುಳ್ಳ ವಸ್ತುನಿಷ್ಠ ಮಾದರಿಯಿಂದ ಕೂಡಿರುತ್ತದೆ. ಇವುಗಳು ಈ ಕೆಳಕಂಡಂತೆ ಇರುತ್ತದೆ.

★ ಪತ್ರಿಕೆ – 1 ಮತ್ತು ಪತ್ರಿಕೆ –2 (ಎರಡೂ ಕಡ್ಡಾಯವಾಗಿರುತ್ತವೆ)

★ ಪತ್ರಿಕೆ – 1 – 200 ಅಂಕಗಳು

★ ಪತ್ರಿಕೆ – 2 200 ಅಂಕಗಳು

★ ಪ್ರತಿ ಪತ್ರಿಕೆಯಲ್ಲಿ 100 ಪ್ರಶ್ನೆಗಳಿರುತ್ತವೆ. ಪ್ರತಿ ಪ್ರಶ್ನೆಗೆ 2 ಅಂಕಗಳಿರು ತ್ತವೆ.

★ ಗರಿಷ್ಠ ಅಂಕಗಳು 200ಪರೀಕ್ಷಾವಧಿ – 2 ಗಂಟೆ.

| ಕ್ರಮ ಸಂಖ್ಯೆ | ವಿಷಯ ಸಂಖ್ಯೆ | ಪ್ರಶ್ನೆಗಳ' | ಅಂಕಗಳು |
|---|---|---|---|
| 01 | ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಾಮುಖ್ಯತೆಯ ವಿಷಯಗಳನ್ನು ಒಳಗಂಡಂತೆ ಸಾಮಾನ್ಯ ಅಧ್ಯಯನ | 40 | 80 |
| 02 | ಮಾನವಿಕ ಶಾಸ್ತ್ರ | 60 | 120 |
| | ಒಟ್ಟು | 100 | 200 |

ಪತ್ರಿಕೆ – 2

| | | | |
|---|---|---|---|
| 01 | ರಾಜ್ಯದಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಸಾಮಾನ್ಯ ಅಧ್ಯಯನ | 100 | 200 |
| 02 | ಸಾಮಾನ್ಯ ವಿಜ್ಞಾನ / ತಂತ್ರಜ್ಞಾನ ಪರಿಸರ ಮತ್ತು ಪರಿಸರ ವಿಜ್ಞಾನ | 40 | 80 |
| 03 | ಗ್ರಹಣ ಶಕ್ತಿ ಮತ್ತು (ಸಂವೇದನಾ ಶಕ್ತಿ) ಮನೋಶಕ್ತಿ | 30 | 60 |
| | ಒಟ್ಟು | 100 | 200 |

★ ಸೂಚನೆ : ಈ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಇರುತ್ತವೆ. ಪೂರ್ವಭಾವಿ ಪರೀಕ್ಷೆಗೆ ಸಂಬಂಧಿಸಿದಂತೆ ಅಭಿರುಚಿ ಪರೀಕ್ಷೆ, ಸಾಮಾನ್ಯ ಮನೋಸಾಮರ್ಥ್ಯ ಪರೀಕ್ಷೆಗೆ ಪಠ್ಯಕ್ರಮ 10ನೇ ತರಗತಿ ಮಟ್ಟದ್ದಾಗಿದ್ದು , ಉಳಿದ ಇತರ ಪತ್ರಿಕೆಗಳು ಪದವಿ ಮಟ್ಟದ್ದಗರುತ್ತವೆ.

**ಪಠ್ಯಕ್ರಮದ ವಿವರ**

**ಪತ್ರಿಕೆ – 1**

★ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಾಮುಖ್ಯತೆ ಪಡೆದಪ್ರಸ್ತುತ ವಿದ್ಯಮಾನಗಳು.

★ ಮಾನವೀಕ ಶಾಸ್ತ್ರ– ಭಾರತದ ಇತಿಹಾಸ – ವಿಷಯವನ್ನು ವಿಶಾಲ ಬುನಾದಿಯಲ್ಲಿ ಸಾಮಾನ್ಯವಾಗಿ ಅರ್ಥೈಸಿಕೊಂಡಿರಬೇಕು. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ದೃಷ್ಟಿಕೋನಗಳಿಂದ ನೋಡಬೇಕು. ಕರ್ನಾಟಕಕ್ಕೆ ವಿಶೇಷ ಮಹತ್ವ ಕೊಟ್ಟಜಾಗತಿಕ ಭೂಗೋಳಶಾಸ್ತ್ರ ಮತ್ತು ಭಾರತದ ಭೂಗೋಳಶಾಸ್ತ್ರ

★ ಭಾರತದ ರಾಜ್ಯ ವ್ಯವಸ್ಥೆ ಮತ್ತು ಅರ್ಥವ್ಯವಸ್ಥೆ, ದೇಶದ ರಾಜಕೀಯ ವ್ಯವಸ್ಥೆ, ಗ್ರಾಮೀಣಾಭಿವೃದ್ಧಿ, ಯೋಜನೆ ಮತ್ತು ಆರ್ಥಿಕ ಸುಧಾರಣೆ – ಅಭಿವೃದ್ಧಿ, ಬಡತನ ನಿರ್ಮೂಲನೆ, ಜನಸಂಖ್ಯಾ ವಿಜ್ಞಾನ , ಸಾಮೂಹಿಕ ವಲಯದ ಕಾರ್ಯತತ್ಪರತೆ ಇತ್ಯಾದಿ.

ಸರ್ಕಾರದ ಕಾರ್ಯಕ್ರಮಗಳು.

★ಸಾಮಾನ್ಯ ವಿಜ್ಞಾನ ಮತ್ತುತಂತ್ರಜ್ಞಾನ, ಪರಿಸರ ಮತ್ತು ಪರಿಸರ ವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಸಮಕಾಲೀನ ಬೆಳವ

**ಪತ್ರಿಕೆ – 2**

★ ರಾಜ್ಯದಪ್ರಾಮುಖ್ಯತೆ ಪಡೆದ ಪ್ರಸ್ತುತ ಘಟನೆಗಳು ಮತ್ತು ರಾಜ್ಯ ಣೆಗೆ ಮತ್ತು ಅವುಗಳದಿನನಿತ್ಯ ಜೀವನ ಒಳಗೊಂಡಂತೆ ಪರಿಣಾಮ ತನ್ನ ಅನುಭವ ಮತ್ತು ಅವಲೋಕನದಿಂದ ಯಾವುದೇ ವಿಜ್ಞಾನ ವಿಭಾಗವನ್ನು ವಿಶೇಷ ವಿಷಯವನ್ನಾಗಿ ಅಧ್ಯಯನ ಮಾಡದಿರುವ ಒಬ್ಬ ಸುಶಿಕ್ಷಿತ ವ್ಯಕ್ತಿ ಪರೀಕ್ಷೆ ಮಾಡಿದಂತೆ, ಆರೋಗ್ಯ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಾಮಾನ್ಯ ವಿಷಯಗಳು, ಪರಿಸರ ವಿಜ್ಞಾನ, ಜೈವಿಕ ವೈವಿಧ್ಯಮಯತೆ (ಬಯೋಡೈವರ್ಸಿಟಿ) ಮತ್ತು ಹವಾಮಾನದಲ್ಲಿ ಬದಲಾವಣೆ ಈ ವಿಷಯಗಳನ್ನು ವಿಶೇಷವಾಗಿ ಅಧ್ಯಯನಮಾಡದಿರುವ ವಿದ್ಯಾರ್ಥಿಯ ತಿಳಿವಳಿಕೆಗನುಗುಣವಾಗಿ.

★ ಸಾಮಾನ್ಯ ಬೌದ್ಧಿಕ ಸಾಮರ್ಥ್ಯ, ಮನೋಶಕ್ತಿ –ಗ್ರಹಿಸುವಿಕೆ –ತಾರ್ಕಿಕ ಪ್ರತಿಪಾದನೆ ಮತ್ತು ವಿಶ್ಲೇಶಿತ ಸಾಮರ್ಥ್ಯ, ನಿರ್ಧಾರ ತೆಗೆದುಕೊಳ್ಳುವಿಕೆ, ಸಮಸ್ಯೆ ಬಿಡಿಸುವಿಕೆ ಮೂಲಭೂತ ಅಸಂಖ್ಯಾತಗಣಿತ (ಸಂಖ್ಯೆಗಳು ಮತ್ತು ಅವುಗಳ ಸಂಬಂಧಗಳು, ಅವುಗಳ ವಿಸ್ತಾರ ಇತ್ಯಾದಿ (10ನೇ ತರಗತಿ ಮಟ್ಟ) ದತ್ತಾಂಶದ ವ್ಯಾಖ್ಯಾನ (ಚಾರ್ಟ್ಸ್, ಗ್ರಾಫ್ಸ್, ಟೇಬಲ್ಸ್, ನಕ್ಷೆಗಳು, ರೇಖಾ ಚಿತ್ರಗಳು, ಕೋಷ್ಟಕಗಳು ಇತ್ಯಾದಿ (10ನೇ ತರಗತಿ ಮಟ್ಟ).

**ಕೆ.ಎ.ಎಸ್.ಮುಖ್ಯ ಪರೀಕ್ಷೆಯ ಪಠ್ಯಕ್ರಮ**

**ಲಿಖಿತ ಪರೀಕ್ಷೆಯ ಪತ್ರಿಕೆಗಳ ಸಂಕ್ಷಿಪ್ತ ವಿವರ :**

| | | | | |
|---|---|---|---|---|
| **ಅರ್ಹತಾ ಪತ್ರಿಕೆಗಳು** | **ಕನ್ನಡ** | | **150 ಅಂಕಗಳು** | **2 ಗಂಟೆ** |
| | **ಇಂಗ್ಲೀಷ್** | | **150 ಅಂಕಗಳು** | **2 ಗಂಟೆ** |
| ಕಡ್ಡಾಯ ಪತ್ರಿಕೆಗಳು | ಪತ್ರಿಕೆ – I | ಪ್ರಬಂಧ (ಎರಡು ಪ್ರಬಂಧಗಳು) | 250 ಅಂಕಗಳು | 3 ಗಂಟೆಗಳು |
| | ಪತ್ರಿಕೆ –II | ಸಾಮಾನ್ಯ ಅಧ್ಯಯನ –1 | 250 ಅಂಕಗಳು | 3 ಗಂಟೆಗಳು |
| | ಪತ್ರಿಕೆ –III | ಸಾಮಾನ್ಯ ಅಧ್ಯಯನ –2 | 250 ಅಂಕಗಳು | 3 ಗಂಟೆಗಳು |
| | ಪತ್ರಿಕೆ – IV | ಸಾಮಾನ್ಯ ಅಧ್ಯಯನ –3 | 250 ಅಂಕಗಳು | 3 ಗಂಟೆಗಳು |
| | ಪತ್ರಿಕೆ – V | ಸಾಮಾನ್ಯ ಅಧ್ಯಯನ –4 | 250 ಅಂಕಗಳು | 3 ಗಂಟೆಗಳು |
| | ಪತ್ರಿಕೆ – VI | ಐಚ್ಛಿಕ ವಿಷಯ ಪತ್ರಿಕೆ –1 | 250 ಅಂಕಗಳು | 3 ಗಂಟೆಗಳು |
| | ಪತ್ರಿಕೆ – VII | ಐಚ್ಛಿಕ ವಿಷಯ ಪತ್ರಿಕೆ –2 | 250 ಅಂಕಗಳು | 3 ಗಂಟೆಗಳು |
| **ಲಿಖಿತ ಪರೀಕ್ಷೆಯ ಒಟ್ಟು ಅಂಕಗಳು** | | | **1750 ಅಂಕಗಳು** | |

ಸೂಚನೆ

1) ಅರ್ಹತಾ ಪತ್ರಿಕೆ ಎಂದರೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಗಳಿಸುವ ಅಂಕಗಳು ಕೇವಲ ಅರ್ಹತಾದಾಯಕವಾಗಿದ್ದು, ಇವುಗಳಲ್ಲಿ ಕನಿಷ್ಠ 35% ಅಂಕಗಳನ್ನು ಪಡೆದರೆ ಮಾತ್ರ ಅದು ಅರ್ಹತಾದಾಯಕವೆನಿಸುತ್ತದೆ. ಆದರೆ ಈ ಪತ್ರಿಕೆಗಳಲ್ಲಿ ಪಡೆಯುವ ಅಂಕಗಳನ್ನು ವ್ಯಕ್ತಿತ್ವ ಅಥವಾ ಮೌಖಿಕ ಪರೀಕ್ಷೆಯ ಮೆರಿಟ್ ಪಟ್ಟಿಗೆ ಅರ್ಹತೆ ಪಡೆಯಲು ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಗಳು ಈ ಮೇಲೆ ತಿಳಿಸಿದ ಅರ್ಹತಾ ಪತ್ರಿಕೆಗಳಿಗೆ ನಿಗದಿಪಡಿಸಿದ ಅಂಕಗಳನ್ನು ಪಡೆಯದಿದ್ದರೆ (ಅರ್ಹತೆ ಪಡೆಯದಿದ್ದರೆ) ಅಂಥ ಅಭ್ಯರ್ಥಿಗಳು ವ್ಯಕ್ತಿತ್ವ ಪರೀಕ್ಷೆ ಹಾಗೂ ಆಯ್ಕೆಗೆ ಅನರ್ಹರಾಗಿರುತ್ತಾರೆ.

2) ಪರೀಕ್ಷೆ ಸಾಂಪ್ರದಾಯಿಕ ವಿವರಣಾತ್ಮಕ ಮಾದರಿಯದಾಗಿದ್ದು, ಎಲ್ಲ ಪತ್ರಿಕೆಗಳೂ ಕಡ್ಡಾಯವಾಗಿರುತ್ತವೆ.

3) ಪ್ರಶ್ನೆಪತ್ರಿಕೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿರುತ್ತದೆ. ಅಭ್ಯರ್ಥಿ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಉತ್ತರಿಸಬಹುದು.

4) ಮುಖ್ಯಪರೀಕ್ಷೆಯ ಪತ್ರಿಕೆ – 1 ಕನ್ನಡ ಮತ್ತು ಪತ್ರಿಕೆ – 2 ಇಂಗ್ಲಿಷ್ ಹೊರತುಪಡಿಸಿ ಉಳಿದವು ಪದವಿ ಮಟ್ಟದ್ದಾಗಿರುತ್ತವೆ. ಆದರೆ ಪತ್ರಿಕೆ – 1 ಕನ್ನಡ ಹಾಗೂ ಪೇಪರ್ – 2 ಇಂಗ್ಲಿಷ್ ಇವುಗಳು ಎಸ್‌ಎಸ್‌ಎಲ್‌ಸಿ ಮಟ್ಟದ್ದಾಗಿರುತ್ತವೆ.

5) ಎಲ್ಲಾ ಏಳೂ ಪತ್ರಿಕೆಗಳೂ ಕಡ್ಡಾಯ. ಪೇಪರ್–2 ರಿಂದ 5ರವರೆಗಿನವು ಮೂರು ವಿಭಾಗಗಳನ್ನು ಹೊಂದಿರುತ್ತವೆ.ಪ್ರತಿಯೊಂದು ಪತ್ರಿಕೆಗೂ ಗರಿಷ್ಠ 250 ಅಂಕಗಳಿದ್ದು, ಮೂರು ತಾಸು ಪರೀಕ್ಷಾ ಅವಧಿಯಾಗಿರುತ್ತದೆ.

6) ಲಿಖಿತ ಹಾಗೂ ವ್ಯಕ್ತಿತ್ವ ಪರೀಕ್ಷೆಯಲ್ಲಿನ ಒಟ್ಟು ಅಂಕಗಳನ್ನು ಅಂತಿಮ ಆಯ್ಕೆಯ ಪಟ್ಟಿಯೊಂದಿಗೆ ಪ್ರಕಟಿಸಲಾಗುತ್ತದೆ.

**ವ್ಯಕ್ತಿತ್ವಪರೀಕ್ಷೆ**

ಮುಖ್ಯ ಪರೀಕ್ಷೆಯಲ್ಲಿ ನಿಗದಿಪಡಿಸಿದಷ್ಟು ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಮಂಡಳಿ ಸಂದರ್ಶಿಸುತ್ತದೆ. ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಹೊರತುಪಡಿಸಿ ಅಭ್ಯರ್ಥಿಯ ಉಳಿದೆಲ್ಲ ವಿವರಗಳು ಸಂದರ್ಶನ ಮಂಡಳಿಯ ಸದಸ್ಯರ ಮುಂದಿರುತ್ತವೆ. ಸಾಮಾನ್ಯ ಆಸಕ್ತಿಯ ವಿಷಯಗಳ ಕುರಿತು ಈ ಹಂತದಲ್ಲಿ ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಕೆಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣನಾದ ನಂತರ ಆಡಳಿತಗಾರನಿಗೆ ಇರಬೇಕಾದ ವ್ಯಕ್ತಿತ್ವ , ದಕ್ಷತೆ, ಆಡಳಿತ ನಿರ್ವಹಣೆಯಲ್ಲಿನ ತಿಳಿವಳಿಕೆ, ಸವಾಲುಗಳನ್ನು ಎದುರಿಸಿ ನಿರ್ಧಾರ ಕೈಗೊಳ್ಳುವ ಪರೀಕ್ಷೆಗೆ ಇಲ್ಲಿ ಹೆಚ್ಚು ಒತ್ತುಕೊಡಲಾಗುತ್ತದೆ. ಅಭ್ಯರ್ಥಿಯ ಕೇವಲ ಬೌದ್ಧಿಕ ಸಾಮರ್ಥ್ಯ ಅಥವಾ ಪುಸ್ತಕೀಯ ಜ್ಞಾನವನ್ನಷ್ಟೇ ಅಳೆಯದೇ ಆತನ ಸುತ್ತಮುತ್ತಲಿನ, ದೇಶ ಹಾಗೂ ದೇಶದಾಚೆಗೂ ನಡೆಯುವ ವಿದ್ಯಮಾನಗಳ ಕುರಿತ ಅವನ ಆಸಕ್ತಿ , ಮಾನಸಿಕ ಸಿದ್ಧತೆ, ಸಾಮಜಿಕ ಸಂಬಂಧ ಹಾಗೂ ನಾಯಕತ್ವ ಇವೆಲ್ಲವನ್ನೂ ಪರೀಕ್ಷಿಸುವುದು ಮಂಡಳಿಯ ಉದ್ದೇಶವಾಗಿದೆ.

ಗ್ರೂಪ್ – ಎ ಮತ್ತು ಗ್ರೂಪ್– ಬಿ ಸೇವೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮುಖ್ಯ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುತ್ತದೆ. ಎಸ್.ಸಿ., ಎಸ್‌ಟಿ ಹಾಗೂ ಇತರ ಹಿಂದುಳಿದ ಅಭ್ಯರ್ಥಿಗಳಿಗೆ ಸಮಾನುಪಾತದಡಿ ಹುದ್ದೆಗಳು ಮೀಸಲಾಗಿರುತ್ತವೆ. ವ್ಯಕ್ತಿತ್ವ ಪರೀಕ್ಷೆಗೆ ಗರಿಷ್ಠ ಅಂಕಗಳು 200 ಇರುತ್ತವೆ.

**ಲಿಖಿತ ಪರೀಕ್ಷೆಯ 9 ಪತ್ರಿಕೆಗಳ ಸಂಪೂರ್ಣ ವಿವರ ಇಂತಿದೆ :**

ಅರ್ಹತಾ ಪತ್ರಿಕೆಗಳು ಕನ್ನಡ 150 ಅಂಕಗಳು 2 ಗಂಟೆಗಳು

ಇಂಗ್ಲಿಷ್ 150 ಅಂಕಗಳು 2 ಗಂಟೆಗಳು

**ಪತ್ರಿಕೆ – 1 ಪ್ರಬಂಧಗಳು**

ಎರಡು ಪ್ರಬಂಧಗಳು (ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ) 250 ಅಂಕಗಳು 3 ಗಂಟೆಗಳು

ಪ್ರಬಂಧ 1 : ಅಂತರರಾಷ್ಟ್ರೀಯ/ರಾಷ್ಟ್ರೀಯ ಮಹತ್ವಕ್ಕೆ ಸಂಬಂಧಪಟ್ಟ ವಿಷಯ .

ಪ್ರಬಂಧ 2 : ರಾಜ್ಯಕ್ಕೆ /ಸ್ಥಳೀಯ ವಿಷಯಕ್ಕೆ ಸಂಬಂಧಪಟ್ಟ

ಮಹತ್ವದ ಅಂಶಗಳು

**ಪತ್ರಿಕೆ – 2 ಸಾಮಾನ್ಯ ಅಧ್ಯಯನ – 1**

1) ಇತಿಹಾಸಹಾಗೂ ಸಾಂಸ್ಕೃತಿಕ ಪರಂಪರೆ, 80/85 250ಅಂಕಗಳು 3 ಗಂಟೆಗಳು
(ಭಾರತ ಮತ್ತು ಕರ್ನಾಟಕ)

2) ಸಾಮಾಜಿಕ ಮತ್ತು ರಾಜಕೀಟ ಗ್ರಹಿಕೆ

3) ಭಾರತೀಯ ಆರ್ಥಿಕತೆ – ಯೋಜನೆ–ಗ್ರಾಮೀಣ ಅಭಿವೃದ್ಧಿ
ದತ್ತಾಂಶ ಸಂಗ್ರಹಣೆ – ವಿಶ್ಲೇಷಣೆ – ವ್ಯಾಖ್ಯಾನ.

**ಪತ್ರಿಕೆ – 3 ಸಾಮಾನ್ಯ ಅಧ್ಯಯನ – 2**

1) ಭೌತಿಕ ಲಕ್ಷಣಗಳು ಹಾಗೂ ನೈಸರ್ಗಿಕ 80/85 250ಅಂಕಗಳು 3 ಗಂಟೆಗಳು
ಸಂಪನ್ಮೂಲಗಳು

2) ಭಾರತೀಯ ಸಂವಿಧಾನದ ಅವಲೋಕನ / ಪಕ್ಷಿನೋಟ

3) ಸಾರ್ವಜನಿಕ ಆಡಳಿತ ಮತ್ತು ನಿರ್ವಹಣೆ, ಅಂತರರಾಷ್ಟ್ರೀಯ
ಸಂಬಂಧಗಳು.

**ಪತ್ರಿಕೆ – 4 ಸಾಮಾನ್ಯ ಅಧ್ಯಯನ – 3**

1) ಭಾರತದ ಬೆಳವಣಿಗೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ 80/85 250 3 ಗಂಟೆಗಳು
ಮತ್ತು ಪ್ರಭಾವ, ಸಾರ್ವಜನಿಕ ರಂಗದಲ್ಲಿ ಮಾಹಿತಿ ತಂತ್ರಜ್ಞಾನ.

2) ನೈಸರ್ಗಿಕ ವಿಜ್ಞಾನ, ಜೀವ ವಿಜ್ಞಾನ, ಕೃಷಿ ಸಂಸ್ಕೃತಿ, ವಿಜ್ಞಾನ
ಆರೋಗ್ಯ ಮತ್ತು ನೈರ್ಮಲ್ಯದಲ್ಲಿ ಉನ್ನತಿ ಮತ್ತು ಆಧುನಿಕ ಪ್ರವೃತ್ತಿ
(ಟ್ರೆಂಡ್).

3) ಪರಿಸರ ಮತ್ತು ಪರಿಸರ ವಿಜ್ಞಾನದ ಬೆಳವಣಿಗೆಯಲ್ಲಿರುವ
ಸವಾಲುಗಳು ಹಾಗೂ ಅದಕ್ಕೆ ಸಂಬಂಧಪಟ್ಟ ಪ್ರಮುಖ ಅಂಶಗಳು

**ಪತ್ರಿಕೆ – 5 ಸಾಮಾನ್ಯ ಅಧ್ಯಯನ – 4**

1) ನೀತಿ ಮೂರು 80/85 250 3 ಗಂಟೆಗಳು

2) ಸಮಗ್ರತೆ ವಿಭಾಗಗಳು

3) ಪ್ರವೃತ್ತಿ ಯೋಗ್ಯತೆ

| | | |
|---|---|---|
| ಪತ್ರಿಕೆ – 6 | ಐಚ್ಛಿಕ ವಿಷಯ ಪತ್ರಿಕೆ –1 | — |
| ಪತ್ರಿಕೆ – 7 | ಐಚ್ಛಿಕ ವಿಷಯ ಪತ್ರಿಕೆ –2 | — |
| | ಒಟ್ಟು | 1750 |
| | ವ್ಯಕ್ತಿತ್ವ ಪರೀಕ್ಷೆ | 200 |
| | ಒಟ್ಟು ಅಂಕಗಳು | 1950 |

**ಅರ್ಹತಾ ಪತ್ರಿಕೆ – 1 : ಕನ್ನಡ**

ಅಭ್ಯರ್ಥಿಯ ಅರ್ಥಗರ್ಭಿತ ಗದ್ಯವನ್ನು ಓದುವ ಹಾಗೂ ಗ್ರಹಿಸುವ ಹಾಗೂ ಕನ್ನಡದಲ್ಲಿ ತನ್ನ ವಿಚಾರಧಾರೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಪರೀಕ್ಷಿಸುವುದು ಈ ಪತ್ರಿಕೆಯ ಉದ್ದೇಶವಾಗಿದೆ.

**ಸಾಮಾನ್ಯಕನ್ನಡ**

1) ವಿಷಯದ ಸಮಗ್ರ ಅರ್ಥೈಸುವಿಕೆ – 25 ಅಂಕಗಳು
2) ಪದ ಪ್ರಯೋಗ – 25 ಅಂಕಗಳು
3) ವಿಷಯ ಸಂಕ್ಷೇಪಣೆ – 25 ಅಂಕಗಳು
4) ಲಘು ಪ್ರಬಂಧ – 25 ಅಂಕಗಳು
5) ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರ – 25 ಅಂಕಗಳು

**ಅರ್ಹತಾ ಪತ್ರಿಕೆ – 2 : ಇಂಗ್ಲಿಷ್**

ಅಭ್ಯರ್ಥಿಯ ಅರ್ಥಗರ್ಭಿತ ಗದ್ಯವನ್ನು ಓದುವ ಹಾಗೂ ಗ್ರಹಿಸುವ ಹಾಗೂ ಇಂಗ್ಲಿಷ್‌ನಲ್ಲಿ ತನ್ನ ವಿಚಾರಧಾರೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಪರೀಕ್ಷಿಸುವುದು ಈ ಪತ್ರಿಕೆಯ ಉದ್ದೇಶವಾಗಿದೆ.

**ಪ್ರಶ್ನೆಗಳು ಈ ಕೆಳಗಿನ ಮಾದರಿಯಲ್ಲಿರುತ್ತವೆ –**

**1) Comprehension of Given Passages - 25 Marks**
**2) Precis Writing - 25 Marks**
**3) Usages - 25 Marks**
**4) Vocabulary - 25 Marks**
**5) Short Essay - 25 Marks**
**6) communication skills - 25 Marks**

**ಕೆಎಎಸ್ ಮುಖ್ಯ ಪರೀಕ್ಷೆಯ ಕಡ್ಡಾಯ**

**ಪತ್ರಿಕೆಗಳ ಸಮಗ್ರ ಪಠ್ಯಕ್ರಮ**

**ಪತ್ರಿಕೆ – 1 ಪ್ರಬಂಧ ಬರೆವಣಿಗೆ**

★ ಈ ಪತ್ರಿಕೆಯಲ್ಲಿ ಎರಡು ಪ್ರಬಂಧಗಳನ್ನು ಬರೆಯಬೇಕು. ಪ್ರತಿ ಪ್ರಬಂಧಕ್ಕೆ 125 ಅಂಕಗಳನ್ನು ನಿಗದಿಪಡಿಸಲಾಗಿದೆ.

★ ಮೊದಲ ಪ್ರಬಂಧ ರಾಷ್ಟ್ರೀಯ / ಅಂತರರಾಷ್ಟ್ರೀಯ ಮಹತ್ವದ ವಿಷಯಗಳ ಮೇರಿರುತ್ತದೆ.

★ ಎರಡನೇ ಪ್ರಬಂಧ ರಾಜ್ಯ / ಸ್ಥಳೀಯ ಮಹತ್ವದ ವಿಷಯಗಳ ಮೇಲಿರುತ್ತದೆ.

**ಪತ್ರಿಕೆ – 2 ಸಾಮಾನ್ಯ ಅಧ್ಯಯನ ಪತ್ರಿಕೆ – 1**

★ ಭಾಗ – 1 ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಪರಂಪರೆ (6 ಘಟಕಗಳು) (ಭಾರತ ಹಾಗೂ ಕರ್ನಾಟಕ)

★ ಘಟಕ – 1 ಭಾರತದ ಸಾಂಸ್ಕೃತಿಕ ಸಂಪತ್ತು (ಆಯ್ದ ಭಾಗಗಳು ಹಾಗೂ ಅಧ್ಯಾಯಗಳು)

**1) ಸಿಂಧೂ ನಾಗರಿಕತೆ :**

ಸಿಂಧೂ ನಾಗರಿಕತೆ ಮತ್ತು ವೇದಗಳ ಕಾಲದ ನಾಗರಿಕತೆ ನಡುವಿನ ವ್ಯತ್ಯಾಸಗಳು, ವರ್ಣ ಮತ್ತು ಜಾತಿ ವ್ಯವಸ್ಥೆಯ ಬೆಳವಣಿಗೆ, ಧಾರ್ಮಿಕ ಸ್ಥಿತಿಗತಿ, ಧಾರ್ಮಿಕ ಚಳವಳಿಗಳ ಉಗಮ.

**2) ಸಾಹಿತ್ಯ :**

ಸಂಸ್ಕೃತ ಸಾಹಿತ್ಯ (ಪ್ರಾಚೀನ ಸಾಹಿತ್ಯ), ವೇದ ಸಾಹಿತ್ಯ, ಮಹಾಕಾವ್ಯಗಳು ಮತ್ತು ಪುರಾಣಗಳು, ಭಾರತೀಯರ ಜೀವನ ಹಾಗೂ ಸಂಸ್ಕೃತಿಯ ಮೇಲೆ ಇವುಗಳ ಪ್ರಭಾವ, ಸಂಸ್ಕೃತದ ಉತ್ಕೃಷ್ಟ ಕವನ, ನಾಟಕ, ಪ್ರಜಾರಾಜ್ಯ ಪದ್ಧತಿಯ ಗದ್ಯ ಕೃತಿಗಳು, ಡನೀತಿ ಪ್ರಸಿದ್ಧ (ಜನಪ್ರಿಯ) ಕತೆಗಳು, ಪಂಚತಂತ್ರ ( ಪ್ರಮುಖವಾದ ಕೃತಿಗಳು ಪಾತ್ರ), ಸಾಹಿತ್ಯಕ್ಕೆ ಮೊಘಲರ ಕೊಡುಗೆಗಳು.

**3) ವಿಜ್ಞಾನ ಮತ್ತು ತಂತ್ರಜ್ಞಾನ**

ಗಣಿತ, ಖಗೋಳಶಾಸ್ತ್ರ, ಬೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರಶರೀರ ವಿಜ್ಞಾನ ಹಾಗೂ ವೈದ್ಯಶಾಸ್ತ್ರ(ಶಸ್ತ್ರವಿಜ್ಞಾನ ಸೇರಿ), ಹಡಗು (ನೌಕಾ) ನಿರ್ಮಾಣ, ಗಣಿ ಹಾಗೂ ಭಗರ್ಭ (ಮೆಟಲರ್ಜಿ) ಶಾಸ್ತ್ರ, ಇಂಜಿನಿಯರಿಂಗ್ ಹಾಗೂ ವಾಸ್ತುಶಿಲ್ಪ.

**4) ಕಲಾ ಪ್ರಕಾರಗಳು (ಕರ್ನಾಟಕ ಹೊರತುಪಡಿಸಿ)**

ಮೌರ್ಯ ಹಾಗೂ ಗುಪ್ತರ ಕಾಲ, ಖಜುರಾಹೋ ದೇವಸ್ಥಾನಗಳು,ಮೌಂಟ್ ಅಬುವಿನಲ್ಲಿನ ಜೈನ ದೇವಾಲಯಗಳು ಹಾಗೂ ಒಡಿಸಿಯನ್ ದೇವಾಲಯಗಳು, ಪಲ್ಲವ, ಚೋಳ ಹಾಗೂ ಪಾಂಡ್ಯರ ಕೊಡುಗೆಗಳು, ಮೊಘಲರ ವಾಸ್ತುಶಿಲ್ಪ, ಕಾಥಡ್ರೆಲ್ ವಾಸ್ತುಶಿಲ್ಪ.

ಬಾಮ್ ಜೀಸಸ್, ಹಳೆಯ ಗೋವಾ, ಸೇಂಟ್ ಪಾಲ್ಸ್, ಕೋಲ್ಕತ್ತಾಹಾಗೂ ಸೇಂಟ್ ಥಾಮಸ್ , ಚೆನ್ನೈ ಚಿತ್ರಕಲೆ ಅಜಂತಾದ ತೈಲ ಚಿತ್ರಗಳು, ಮೊಘಲರ ಹಾಗೂ ರಜಪೂತರ ಚಿತ್ರಕಲಾ ಶಾಲೆಗಳು, ನೃತ್ಯ ಹಾಗೂ ಸಂಗೀತ, ಸಾಂಪ್ರದಾಯಿಕ ನೃತ್ಯ ಹಾಗೂ ಸಂಗೀತ , ಸಂಗೀತಕ್ಕೆ ಮೊಘಲರ ಕೊಡುಗೆಗಳು, ಭಾರತದ ಜನಪದ ಕಲೆಗಳು.

**5)** ಹೊರ ಜಗತ್ತಿಗೆ ಭಾರತದ ಸಾಂಸ್ಕೃತಿಕ ಕೊಡುಗೆ, ಮಧ್ಯ ಏಶಿಯಾ, ಚೈನಾ, ಜಪಾನ್, ದಕ್ಷಿಣ ಪೂರ್ವ, (ಆಗ್ನೇಯ) ಏಶಿಯಾ ಹಾಗೂ ಶ್ರೀಲಂಕಾ.

**6) ಭಾರತೀಯ ಧರ್ಮಗಳು**

1. ಹಿಂದೂ ಧರ್ಮ : ಸಾಮಾನ್ಯ ಲಕ್ಷಣಗಳು ಹಾಗೂ ಸಾಮಾನ್ಯ ನಂಬಿಕೆಗಳು, ಪುರುಷಾರ್ಥಗಳು ಆಚರಣೆ ಹಾಗೂ ನೀತಿ ತತ್ವ ಹಬ್ಬಗಳು ಹಾಗೂ ಪವಿತ್ರದಿನಗಳು, ತೀರ್ಥಯಾತ್ರೆ ಹಾಗೂ ಜಾತ್ರೆಗಳು.

ಹಿಂದೂ ಪಂಥಗಳು : ಹಿಂದೂ ಧರ್ಮ, ವಿವಿಧ ಪಂಥಗಳ ಒಕ್ಕೂಟ, ಶೈವ, ವೈಷ್ಣವ ಹಾಗೂ ಶಾಕ್ತ, ಉಪನಿಷತ್ತಿನ ತತ್ವ ಹಾಗೂ ಭಗವದ್ಗೀತೆ, ಪತಂಜಲಿ ಯೋಗತತ್ವ (ನೀತಿ) ಸಿದ್ಧಾಂತ).

2. ಜೈನಧರ್ಮ (ಜೈನಿಸಂ) ತತ್ವಗಳು, ರತ್ನತ್ರಯ ನೀತಿಸಂಹಿತೆ, ಸಮಾನತೆ, ಅಹಿಂಸೆ, ಪಂಥಗಳು : ದಿಗಂಬರ ಹಾಗೂ ಶ್ವೇತಾಂಬರ,

3. ಭೌದ್ಧಧರ್ಮ (ಬುದ್ಧಿಸಂ) : ತತ್ವಗಳು – ನಾಲ್ಕು ಶ್ರೇಷ್ಠ ಸತ್ಯಗಳು, ಅಷ್ಟಾಂಗ ಮಾರ್ಗ, ನಿರ್ವಾಣ, ನೀತಿತತ್ವ ಪಂಥಗಳು, ಹೀನಯಾನ ಹಾಗೂ ಮಹಾಯಾನ.

4. ಕ್ರಿಶ್ಚಿಯಾನಿಟಿ (ಕ್ರೈಸ್ತಧರ್ಮ) ಜೀಸಸ್‌ರ ಬೋಧನೆ, ಕ್ರೈಸ್ತಧರ್ಮದ ಸಿದ್ಧಾಂತಗಳು ಹಾಗೂ ಧರ್ಮಾದ್ಯಯನ ಕ್ರೈಸ್ತಧರ್ಮದ ಪಂಗಡಗಳು, ರೋಮನ್ ಕ್ಯಾಥೋಲಿಕ್ ಚರ್ಚ್, ಪೂರ್ವದ ಸಾಂಪ್ರದಾಯಿಕ ಚರ್ಚುಗಳು ಹಾಗೂ ಪ್ರಾಟೆಸ್ಟೆಂಟ್‌ರ ಚರ್ಚ್‌ಗಳು, ಭಾರತದಲ್ಲಿನ ಕ್ರೈಸ್ತ ಮಿಶನರಿಗಳ ಚಟುವಟಿಕೆಗಳು.

5. ಇಸ್ಲಾಂ : ತತ್ವಗಳು ಹಾಗೂ ಆಚರಣೆಗಳು, ದೇವರು, ಧರ್ಮ ತತ್ವ ನಿರೂಪಣೆ, ಇಸ್ಲಾಂನ ಪಂಚಸ್ತಂಭಾ ಕೃತಿಗಳು ಪವಿತ್ರ ಸ್ಥಳಗಳು ಹಾಗೂ ದಿನಗಳು, ಕುಟುಂಬ ವ್ಯವಸ್ಥೆ ಹಾಗೂ ಷರಿಯಾ, ಕರ್ನಾಟಕದ ಸೂಫಿಗಳು, ಪಂಥಗಳು, ಷಿಯಾ ಹಾಗೂ ಸುನ್ನಿ,

6. ಸಿಖ್ ಪಂಥ :ನೀತಿಗಳು, ಆಚರಣೆಗಳು ಮತ್ತು ಅದರ ಬೆಳವಣಿಗೆ.

**ಘಟಕ – 2 ಪರಿವರ್ತನೆಯತ್ತ ಭಾರತೀಯ ಸಮಾಜ : ಪ್ರಮುಖ ವೈಚಾರಿಕ ಸಿದ್ಧಾಂತಗಳು. ಆಧುನಿಕ ಭಾರತದ ಇತಿಹಾಸ – 19ನೇ ಶತಮಾನದ ಪ್ರಾರಂಭದಿಂದಾದ ಸುಧಾರಣೆಗಳು ಹಾಗೂ ಸುಧಾರಕರು.**

1. ಸಾಮಾಜಿಕ ಮತ್ತು ಧಾರ್ಮಿಕ ದೋಷಗಳ ನಿರ್ಮೂಲನೆ
2. ಸರ್ವರಿಗೂ ವೇದಗಳು ಪ್ರಜಾತ್ಯತೀತ ಸಮಾಜ
3. ಸೇವಾ ನೀತಿ
4. ದಲಿತ ವರ್ಗಗಳ ದಾಸ್ಯ ವಿಮೋಚನೆ
5. ದ್ವಿರಾಷ್ಟ್ರ ಸಿದ್ಧಾಂತ ಮತ್ತು ಇಸ್ಲಾಂನ ಪುನರುಜ್ಜೀವನ ತತ್ವ
6. ಧರ್ಮಹಾಗೂ ಶಿಕ್ಷಣದ ಮುಖಾಂತರ ಶೋಷಣೆಗೊಳಗಾದವರ (ದಲಿತ ವರ್ಗಗಳ) ಸಬಲೀಕರಣ
7. ಹಿಂದುತ್ವ ಹಾಗೂ ದೇಶಭಕ್ತಿ.
8. ದ್ರಾವಿಡ ಚಳವಳಿ
9. ಶೋಷಣೆಯ ಮುಕ್ತಿಗಾಗಿ ದಲಿತರ ಹೋರಾಟ ಹಾಗೂ ಅವರ ಸಬಲೀಕರಣ
10. ಸಮಾಜವಾದ (ಸಾಮ್ಯವಾದದ) ಮಾರ್ಗ (ಅಪ್ರೋಚ್) ಹಾಗೂ ಸಂಪೂರ್ಣ ಕ್ರಾಂತಿ.
11. ಗ್ರಾಮ ಸ್ವರಾಜ್ಯ, ಸತ್ಯಾಗ್ರಹ ಹಾಗೂ ಭೂದಾನ

**ಘಟಕ – 3 ಕರ್ನಾಟಕದ ಇತಿಹಾಸ ಹಾಗೂ ಸಾಂಸ್ಕೃತಿಕ ಪರಂಪರೆ**

**ಕದಂಬರಿಂದ ಹೊಯ್ಸಳರವರೆಗೆ**

1. ಕರ್ನಾಟಕದ ಪುರಾತನ ಸಂಪ್ರದಾಯಗಳು :ಕನ್ನಡ ಭಾಷೆ ಹಾಗೂ ಸಾಹಿತ್ಯ, ಕನ್ನಡ ನಾಡಿನ ವ್ಯಾಪ್ತಿ , ರಾಜ್ಯ ಹಾಗೂ ಜಿಲ್ಲೆಗಳ ಗೆಜೆಟಿಯರ್‌ಗಳು, ಕರ್ನಾಟಕದಲ್ಲಿನ ವಸ್ತು ಸಂಗ್ರಹಾಲಯಗಳು, ಐತಿಹಾಸಿಕ ದಾಖಲೆಗಳು, ಸ್ಮಾರಕಗಳ ಸುರಕ್ಷತೆ ಮತ್ತು ಸಂರಕ್ಷಣೆ , ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾ ಕಾರ್ಯ, ಕರ್ನಾಟಕದಲ್ಲಿ ವಿಶ್ವ ಪರಂಪರೆಯ ಸ್ಥಳಗಳು.

2. ಕದಂಬರಿಂದ ಹೊಯ್ಸಳರವರೆಗೆ : ಶಿಲ್ಪಕಲೆ , ಸಾಹಿತ್ಯ ಮತ್ತು ಧರ್ಮ ಕೊಡುಗೆಗಳು.

**ಘಟಕ – 4 ವಿಜಯನಗರ ಸಾಮ್ರಾಜ್ಯ ಹಾಗೂ ಆ ನಂತರ (1336–1799)**

1. ವಿಜಯನಗರ ಸಾಮ್ರಾಜ್ಯ : ಸಾಮ್ರಜ್ಯದ ಉದಯ, ಸಾಮ್ರಾಜ್ಯದ ಗುರಿಗಳು ಹಾಗೂ ಆಶಯಗಳು, ವಿದ್ಯಾರಣ್ಯ , ರಾಜಕೀಯ ಇತಿಹಾಸ, ಹರಿಹರ – ಬುಕ್ಕ ಇಮ್ಮಡಿ ದೇವರಾಯ, ಕೃಷ್ಣದೇವರಾಯ ಹಾಗೂ ಅಳಿಯ ರಾಮರಾಯ – ತಾಳಿಕೋಟೆ ಕದನ ಮತ್ತು ನಂತರ ಪರಿಣಾಮಗಳು, ರಾಜಧಾನಿಯ ವೈಭಾವ, ಆಡಳಿತ, ಸಮಾಜ, ಅರ್ಥವ್ಯವಸ್ಥೆ ಹಾಗೂ ಧರ್ಮ, ಕಲಾ ಪ್ರಕಾರಗಳು, ಚಿತ್ರ ಕಲೆ, ಸಂಗೀತ , ನೃತ್ಯ, ಸಾಹಿತ್ಯ , ವಾಸ್ತುಶಿಲ್ಪ ಶಿಲ್ಪಕಲೆ, ವಿಜಯನಗರ ಕುರಿತಾದ ವಿದೇಶಿಯರ ವಿವರಣೆಗಳು.

2. ಧಾರ್ಮಿಕ ಪಂಥಗಳು : ಶಂಕರಾಚಾರ್ಯ, ರಾಮಾನುಜಚಾರ್ಯ, ಮಧ್ವಾಚಾರ್ಯ, ಶ್ರೀ ಬಸವೇಶ್ವರ, ವೀರಶೈವ, ವಚನ ಚಳವಳಿ, ಹರಿದಾಸ ಚಳವಳಿ, ಕಾಳಾಮುಖ, ಶಾಕ್ತ ಹಾಗೂ ಪಾಶುಪತ ಪಂಥಗಳು.

3. ಬಹಮನಿ ಶಾಹಿಗಳು : ಮೊಹ್ಮದ್ ಗವಾನ್, ಬಹಮನಿಯ ಕೊಡುಗೆಗಳು, ಬಿಜಾಪುರದ ಆದಿಲ್‌ಶಾಹಿಗಳು, ಸಾಹಿತ್ಯ ಹಾಗೂ ವಾಸ್ತುಶಿಲ್ಪಕ್ಕೆ ಕೊಡುಗೆಗಳು, ಕರ್ನಾಟಕದಲ್ಲಿನ ಸೂಫಿಗಳು.

4. ಚಿಕ್ಕದೇವರಾಜ ಒಡೆಯರ್ : ಕೊಡುಗೆಗಳು, ಕೆಳದಿ ಮತ್ತು ಚಿತ್ರದುರ್ಗದ ನಾಯಕರು, ರಾಣಿ ಚೆನ್ನಮ್ಮ , ಸಂಗೊಳ್ಳಿ ರಾಯಣ್ಣ ಯಲಹಂಕದ ನಾಡಪ್ರಭು, ಹೈದರಾಲಿ ಹಾಗೂ ಟಿಪ್ಪುಸುಲ್ತಾನ (1761–1977)

**ಘಟಕ – 5 ಆಧುನಿಕ ಮೈಸೂರು (1799–1947)**

1. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳು

2. ಬ್ರಿಟಿಷರ ವಿರುದ್ಧ ಕರ್ನಾಟಕದ ಸೈನಿಕರ ದಂಗೆ

3. ಕಮೀಷನರ್‌ರ ಆಡಳಿತ (1831–1881)

4. ಹೈದ್ರಾಬಾದ್ ಕರ್ನಾಟಕದಲ್ಲಿ ನಿಜಾಮರ ಆಡಳಿತ

5. ದಿವಾನರ ಆಳ್ವಿಕೆಯಲ್ಲಿ ಮೈಸೂರಿನ ಪ್ರಗತಿ.

**ಘಟಕ – 6 ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ಹಾಗೂ ಏಕೀಕರಣ (1885–1956)**

1)ರಾಷ್ಟ್ರೀಯತೆಯ ಉದಯ

ಗಾಂಧಿ ಪೂರ್ವಯುಗ (1885–1920) ಗಾಂಧಿಯುಗ (1920–1948)

2) ಹೈದ್ರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ

3) ಸ್ವಾತಂತ್ರ್ಯ ಹೋರಾಟದಲ್ಲಿನ ಪ್ರಮುಖ ವ್ಯಕ್ತಿಗಳು

4. ಕರ್ನಾಟಕದ ಏಕೀಕರಣ – ಏಕೀಕರಣ ಚಳವಳಿಯ ಉದಯಕ್ಕೆ ಕಾರಣಗಳು. ಆಲೂರ ವೆಂಕಟರಾಯರು – ಸಾಕ್ಷರತೆಯ ಪಾತ್ರ ಸಾಂಸ್ಕೃತಿಕ ಸಂಘಗಳು ಹಾಗೂ ಮುದ್ರಣ ಮಾಧ್ಯಮಗಳ ಪಾತ್ರಕರ್ನಾಟಕ ಏಕೀಕರಣದ ಮೂರು ಹಂತಗಳು ( 1947–1956)

5) ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಳು : ಮಿಷನರಿಗಳು ಹಾಗೂ ಸ್ವಯಂ ಸಂಸ್ಥೆಗಳಿಂದ ಶಿಕ್ಷಣ ಪ್ರಸಾರ, ಮುದ್ರಣ ಹಾಗೂ ವೃತ್ತಪತ್ರಿಕೆಗಳು, ಸಾಹಿತ್ಯ ಹಾಗೂ ವಿದ್ವತ್ಪೂರ್ಣ ಅಧ್ಯಯನ, ಕನ್ನಡಸಾಹಿತ್ಯದಲ್ಲಿನ ಆಧುನಿಕ ಪ್ರಕಾರಗಳು ಹಿಂದುಳಿದ ವರ್ಗಗಳ ಚಳವಳಿ, ಮಿಲ್ಲರ್ ಸಮಿತಿಯ ವರದಿ, ಕರ್ನಾಟಕದ ಜಾನಪದ ಕಲೆಗಳು.

**ಭಾಗ – 2 ಸಾಮಾಜಿಕ ಹಾಗೂ ರಾಜಕೀಯ ಚಿತ್ರಣ (ಪರ್ಸ್‌ಪೆಕ್ಟಿವ್) (07 ಘಟಕಗಳು)**

1) ಸ್ವಾತಂತ್ರ್ಯ ನಂತರದ ಕರ್ನಾಟಕ : ರಾಜಕೀಯ ಬಲವರ್ಧನೆ, ಹಿಂದಿನ ಸರ್ಕಾರಗಳ ಪ್ರಯತ್ನಗಳು, ಹಿಂದುಳಿದ ವರ್ಗಗಳು ಹಾಗೂ ಸಾಮಾಜಿಕ ನ್ಯಾಯ – ಹಾವನೂರ ಸಮಿತಿ, ವೆಂಕಟಸ್ವಾಮಿ ಸಮಿತಿ, ಚಿನ್ನಪ್ಪರೆಡ್ಡಿ ಸಮಿತಿ ವರದಿಗಳು – ಇತ್ತೀಚಿನ ಬೆಳವಣಿಗೆಗಳು, ಭಾಷಾ ಸಮಸ್ಯೆ, ಗೋಕಾಕ ಚಳವಳಿ, ವಿವಾದಗಳು ಹಾಗೂ ದೃಷ್ಟಿಕೋನಗಳು, ಅಂತರರಾಜ್ಯ ವಿವಾದಗಳು, ಗಡಿ ತಕರಾರುಗಳು, ಮಹಾಜನ್ ವರದಿ ಹಾಗೂ ಅದರ ಪರಿಣಾಮ, ಜಲವಿವಾದಗಳು ರೈತರ ಚಳವಳಿ, ಪ್ರಾದೇಶಿಕ ಅಸ ಮತೋಲನ ಹಾಗೂ ನಂಜುಂಡಪ್ಪ ಸಮಿತಿ ವರದಿ.

2) ಸಾಮಾಜಿಕ ಬದಲಾವಣೆಗಳು ಹಾಗೂ ಚಳವಳಿಗಳು : ಸಾಮಾಜಿಕ ಸಂರಚನೆ ಹಾಗೂ ಸಾಮಾಜಿಕ ಬದಲಾವಣೆ, ಸಾಮಾಜಿಕ ಬದಲಾವಣೆಯ ಸಿದ್ಧಾಂತಗಳು, ಸಾಮಾಜಿಕ ವಿಘಟನೆ ಹಾಗೂ ಸಾಮಾಜಿಕ ಚಳವಳಿಗಳು, ನಿರ್ದೇಶಿತ ಸಾಮಾಜಿಕ ಪರಿವರ್ತನೆ, ಸಾಮಾಜಿಕ ನೀತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ:

3) ಸಾಮಾಜಿಕ ಬದಲಾವಣೆ ಹಾಗೂ ಆಧುನೀಕರಣ : ಪಾತ್ರ ಸಂಘರ್ಷದ ಸಮಸ್ಯೆಗಳು, ಒಳ ಅಂತರ ತಲೆಮಾರಿನ ಕಂದಕ, ಯುವಕರಲ್ಲಿ ಅಶಾಂತಿ ಹಾಗೂ ಶಿಕ್ಷಣದ ವಾಣಿಜ್ಯೀಕರಣ, ಶಿಕ್ಷಣದ ಶಕ್ತಿಯಾಗಿ ಭಾರತದ ಉಗಮ, ಮಹಿಳಾ ಸ್ಥಿತಿಗತಿಯ ಬದಲಾವಣೆಗಳು ಹಾಗೂ ಸಾಮಾಜಿಕ ಚಳವಳಿಗಳು, ಕೈಗಾರೀಕೀಕರಣ ಹಾಗೂ ನಗರೀಕರಣ, ಒತ್ತಡಗುಂಪುಗಳ ಪಾತ್ರ **(Role of pressure groups)** ಸಾಂಸ್ಕೃತೀಕರಣ, ಪಾಶ್ಚಾತ್ಯೀಕರಣ ಹಾಗೂ ಆಧುನೀಕರಣ, ಆಧುನಿಕತಾವಾದ ವಿರುದ್ಧ ಸಂಪ್ರದಾಯವಾದ, ಪ್ರಚಲಿತ ಸಾಮಾಜಿಕ ಪಿಡುಗುಗಳು, ಮೂಲಭೂತವಾದಹಾಗೂ ಭಯೋತ್ಪಾದನೆ, ನಕ್ಸಲ್‌ವಾದ, ಸ್ವಜನಪಕ್ಷಪಾತ, ಭ್ರಷ್ಟಾಚಾರ ಹಾಗೂ ಕಪ್ಪು ಹಣ.

4) ಸರ್ಕಾರ ಹಾಗೂ ರಾಜಕೀಯ ವ್ಯವಸ್ಥೆ : ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ, ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ನಿರ್ವಹಣೆ, ರಾಜಕೀಯ ಪಕ್ಷಗಳು ಹಾಗೂ ಅವುಗಳ ಸಾಮಾಜಿಕ ರಚನೆ.

5) ಅಧಿಕಾರ ವಿಕೇಂದ್ರೀಕರಣ : ಅಧಿಕಾರ ವಿಕೇಂದ್ರೀಕರಣ ಹಾಗೂ ರಾಜಕೀಯ ಭಾಗವಹಿಸುವಿಕೆ, ಕೇಂದ್ರ ಸರ್ಕಾರ, ಸಂಪತ್ತು, ಮಂತ್ರಿಮಂಡಲ, ಸರ್ವೋಚ್ಚ ನ್ಯಾಯಾಲಯ, ನ್ಯಾಯಾಂಗ ಪರಾಮರ್ಶೆ, ಕೇಂದ್ರಹಾಗೂ ರಾಜ್ಯ ಸಂಬಂಧಗಳು, ರಾಜ್ಯ ಸರ್ಕಾರ, ರಾಜ್ಯಪಾಲರ ಪಾತ್ರ, ಪಂಚಾಯತ್ ರಾಜ್, ಭಾರರತದ ರಾಜಕೀಯದಲ್ಲಿ ವರ್ಗ ಹಾಗೂ ಜಾತಿಗಳು,ಪ್ರಾದೇಶಿಕ ರಾಜಕೀಯ, ಭಾಷಾಂಧತೆ **(Linguism)** ಮತ್ತು ಮತಾಂಧತೆ, (ಧರ್ಮ ನಿರಪೇಕ್ಷ) ಜಾತ್ಯತೀತ ನೀತಿಯ ಸಮಸ್ಯೆಗಳು ಹಾಗೂ ರಾಷ್ಟ್ರದ ಏಕತೆಯ ಸಮಸ್ಯೆಗಳು, ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಮತದಾನ, ಮತಬ್ಯಾಂಕ್ ರಾಜಕೀಯ **(Vote Bank Politics)**.

6) ಸಾಮಾಜಿಕ ಆರ್ಥಿಕ ವ್ಯವಸ್ಥೆ : ಯಜಮಾನಿ ವ್ಯವಸ್ಥೆ ಸಾಂಪ್ರದಾಯಿಕ ಸಮಾಜದ ಮೇಲೆ ಅದರ ಪ್ರಭಾವ, ಮಾರುಕಟ್ಟೆ ವ್ಯವಸ್ಥೆ ಹಾಗೂ ಅದರ ಸಾಮಾಜಿಕ ಪರಿಣಾಮಗಳು, ವೃತ್ತಿಪರ ವೈವಿಧ್ಯತೆ ಹಾಗೂ ಸಾಮಾಜಿಕ ರಚನೆ, ವೃತ್ತಿ ಹಾಗೂ ವೃತ್ತಿಪರತೆ

ಕಾರ್ಮಿಕ ಸಂಘಗಳ ಪಾತ್ರ , ಸಾಮಾಜಿಕ ನಿರ್ಧಾರಗಳು ಹಾಗೂ ಆರ್ಥಿಕ ಬೆಳವಣಿಗೆ ಪರಿಣಾಮಗಳು, ಆರ್ಥಿಕ ಅಸಮಾನತೆ, ಶೋಷಣೆ ಹಾಗೂ ಭ್ರಷ್ಟಾಚಾರ, ಜಾಗತೀಕರಣ ಹಾಗೂ ಸಮಾಜದ ಮೇಲೆ ಅದರ ಪ್ರಭಾವ.

7) ಗ್ರಾಮೀಣ ಸಾಮಾಜಿಕ ವ್ಯವಸ್ಥೆ ಹಾಗೂ ಗ್ರಾಮೀಣಾಭಿವೃದ್ಧಿ : ಗ್ರಾಮೀಣ ಸಮುದಾಯದ ಸಾಮಾಜಿಕ – ಸಾಂಸ್ಕೃತಿಕ ದೃಷ್ಟಿಕೋನಗಳು ಸಾಂಪ್ರದಾಯಿಕ ಅಧಿಕಾರ ರಚನೆ ಪ್ರಜಾಪ್ರಭುತ್ವೀಕರಣ ಹಾಗೂ ನಾಯಕತ್ವ , ಬಡತನ ಋಣದಾರಿಕೆ, ಜೀವ ಕಾರ್ಮಿಕರು ಭೂ ಸುಧಾರಣೆಯ ಸಾಮಾಜಿಕ ಪರಿಣಾಮಗಳು, ಗ್ರಾಮೀಣಾಭಿವೃದ್ಧಿ ಯೋಜನೆಗಳು, ಹಸಿರು ಕ್ರಾಂತಿ, ಗ್ರಾಮೀಣಾಭಿವೃದ್ಧಿಯ ನೂತನ ನೀತಿಗಳು, ಬದಲಾಗುತ್ತಿರುವ ಗ್ರಾಮೀಣ ಚಿತ್ರಣ.

**ಘಟಕ – 3 ಭಾರದ ಅರ್ಥವ್ಯವಸ್ಥೆ – ಯೋಜನೆ – ಗ್ರಾಮೀಮಾಭಿವೃದ್ಧಿ (8 ಘಟಕಗಳು)**

1. ಭಾರತದ ಅರ್ಥವ್ಯವಸ್ಥೆ : ಸ್ವಾತಂತ್ರ್ಯ ನಂತರದ ಬೆಳವಣಿಗೆ, ಕೃಷಿ, ಕೈಗಾರಿಕೆ ಹಾಗೂ ತೃತೀಯ ವಲಯಗಳ ಅನುಭವ, ಬೆಳವಣಿಗೆ ಹಾಗೂ ವಿತರಣಾ ನ್ಯಾಯ, ಬಡತನ ಹಾಗೂ ಅಸಮಾನತೆ, ಯೋಜನೆಯ ಅವಧಿಯಲ್ಲಿ ಕರ್ನಾಟಕದ ಆರ್ಥಿಕತೆಯ ಬೆಳವಣಿಗೆ, ರಾಜ್ಯದ ಆರ್ಥಿಕತೆಯಲ್ಲಿ ಬೆಳವಣಿಗೆ ಹಾಗೂ ವಲಯವಾರು ಬದಲಾವಣೆ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಸಂಪರ್ಕಗಳು.

2. ಭಾರತ ಹಾಗೂ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳು : ಬೆಳವಣಿಗೆ ಹಾಗೂ ವ್ಯಾಪಾರ ಗಾತ್ರ ಆಮದು ಹಾಗೂ ರಫ್ತು ಸಂಯೋಜನೆ ಮತ್ತು ದಿಕ್ಕು ಆರ್ಥಿಕ ಬೆಳವಣಿಗೆಯಲ್ಲಿ ದೇಶೀಯ ಹಾಗೂ ವಿದೇಶೀಯ ಬಂಡವಾಳ, ಭಾರತದ ವಿದೇಶಿ ವ್ಯಾಪಾರ ನೀತಿಯಲ್ಲಿ ಬದಲಾವಣೆ , ಸಂದಾಯ ಬಾಕಿ ಹಾಗೂ ವಿದೇಶಿ ವಿನಿಮಯ, ಕರ್ನಾಟಕದ ರಫ್ತುಗಳು ಪ್ರಮಾಣ, ಸಂಯೋಜನೆ ಹಾಗೂ ದಿಕ್ಕು .

3) ಅಭಿವೃದ್ಧಿ ಮಾದರಿಯ ಹಾಗೂ ಗ್ರಾಮ ಮತ್ತು ನಗರ ಪ್ರದೇಶಗಳ ನಡುವಿನ ಅಸಮಾನತೆಗಳು, ಅಸಮತೋಲನ ನಿವಾರಣೆಯಲ್ಲಿನ ಸರ್ಕಾರದ ಸಾರ್ವಜನಿಕ ನೀತಿಗಳು, ವಿಶೇಷ ಆರ್ಥಿಕ ವಲಯದ ನಿರೀಕ್ಷೆಗಳು ಹಾಗೂ ಸಮಸ್ಯೆಗಳು, ಕರ್ನಾಟಕದಲ್ಲಿ ಅಭಿವೃದ್ಧಿಯಲ್ಲಿನ ಅಸಮಾನತೆಗಳು ಹಾಗೂ ಸಾರ್ವಜನಿಕ ನೀತಿಗಳು, ಅಭಿವೃದ್ಧಿಯಲ್ಲಿನ ಅಸಮತೋಲನದ ನಿವಾರಣಾ ಕ್ರಮಗಳು, ಪ್ರಾದೇಶಿಕ ಅಭಿವೃದ್ಧಿ ಮಂಡಳಿಗಳು.

4) ಯೋಜನೆ : ಯೋಜನಾ ಗುರಿಗಳು, ಉದ್ದೇಶಗಳು ಹಾಗೂ ಮಾರ್ಗೋಪಾಯಗಳು, ಪಂಚವಾರ್ಷಿಕ ಯೋಜನೆಗಳ ಸಾಧನೆಗಳು ಹಾಗೂ ವಿಫಲತೆಗಳು ( 1ರಿಂದ 7ನೇ ಪಂಚವಾರ್ಷಿಕ ಯೋಜನೆಗಳು) ಹೊಸ ಆರ್ಥಿಕ ನೀತಿ ಅವಧಿಯಲ್ಲಿ ಅಭಿವೃದ್ಧಿ ಯೋಜನೆಗಳು ( 8ನೇ ಪಂಚವಾರ್ಷಿಕ ಯೋಜನಾ ನಂತರ) ಕರ್ನಾಟಕದಲ್ಲಿ ಯೋಜನೆ.

5) ವಿಕೇಂದ್ರೀಕರಣ : ಮೇಲಿನ ಹಂತದಿಂದ ಕೆಳಹಂತದ ಯೋಜನೆ ಹಾಗೂ ಕೆಳಹಂತದಿಂದ ಮೇಲು ಹಂತದ ಯೋಜನೆಗಳ ಅನುಕೂಲ– ಅನನುಕೂಲತೆಗಳು, ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಯೋಜನಾ ವ್ಯವಸ್ಥೆ ಹಾಗೂ ಅನುಭವ, ಯೋಜನೆ ಹಾಗೂ ಸಾಮರ್ಥ್ಯ ನಿರ್ಮಾಣ, ಯೋಜನೆ ಹಾಗೂ ಹಣಕಾಸು ನೆರವು, ಕರ್ನಾಟಕದಲ್ಲಿ ಯೋಜನಾ ವಿಕೇಂದ್ರೀಕರಣ, ಸಂಪನ್ಮೂಲ ಕ್ರೋಢೀಕರಣ ಹಾಗೂ ವರ್ಗಾವಣೆ, ಜಿಲ್ಲಾ ಯೋಜನಾ ಸಮಿತಿ, ರಾಜ್ಯ ಹಣಕಾಸು ಹಾಗೂ ಸ್ಥಳೀಯ ಹಣಕಾಸು, ರಾಜ್ಯ ಹಣಕಾಸು ಆಯೋಗ.

6) ಗ್ರಾಮಾಭಿವೃದ್ಧಿ :ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯತೆ, ಗ್ರಾಮಾಭಿವೃದ್ಧಿ ಭೂ ಸುಧಾರಣೆಯಲ್ಲಿ ಗಾಂಧೀಜಿ ನಿಲುವು, ಕೃಷಿಹಿಡುವಳಿ ಗಾತ್ರಹಾಗೂ ಉತ್ಪಾಕತೆ, ನೀರಾವರಿ ಸಮಸ್ಯೆಗಳು ಹಾಗೂ ಖುಷ್ಕಿ ಬೇಸಾಯದ ಸಮಸ್ಯೆಗಳು, ಆಹಾರ ಭದ್ರತೆ, ಗ್ರಾಮೀಣ ಸಾಲ, ಕೃಷಿ ಮಾರುಕಟ್ಟೆ, ಕೃಷಿ ಕಾರ್ಮಿಕರು, ಗ್ರಾಮೀಣ ಕೈಗಾರಿಕೆಗಳು ಹಾಗೂ ಉದ್ಯೋಗ.

ಕರ್ನಾಟಕದ ಕೃಷಿಯಲ್ಲಿನ ಸಮಸ್ಯೆಗಳು, ಗ್ರಾಮೀಣ ಆರ್ಥಿಕ ಮೂಲ ಸೌಕರ್ಯಗಳು (ಶಕ್ತಿ ನೀರಾವರಿ, ಸಾರಿಗೆ ಸಂಪರ್ಕ ಮಾರುಕಟ್ಟೆಗಳು), ಗ್ರಾಮೀಣ ಸಾಮಾಜಿಕ ಮೂಲ ಸೌಕರ್ಯಗಳು, ವಸತಿ, ಕುಡಿಯುವ ನೀರು, ಆರೋಗ್ಯ ರಕ್ಷಣೆ ಹಾಗೂ ಒಳಚರಂಡಿ, ಗ್ರಾಮೀಣ ಆರೋಗ್ಯ ವ್ಯವಸ್ಥೆ ಹಾಗೂ ಅದರ ಒದಗಿಸುವಿಕೆ (ವಿತರಣೆ) ಕರ್ನಾಟಕದಲ್ಲಿ ಆರ್ಥಿಕ, ಸಾಮಾಜಿಕ, ಮೂಲ ಸೌಕರ್ಯಗಳ ಅಭಿವೃದ್ಧಿ, ಕರ್ನಾಟಕದಲ್ಲಿ ಗ್ರಾಮೀಣ ಮಾರುಕಟ್ಟೆಗಳು, ಕರ್ನಾಟಕದಲ್ಲಿ ವಸತಿ ಹಾಗೂ ಆರೋಗ್ಯ ರಕ್ಷಣಾ ಯೋಜನೆಗಳು.

7. ಗ್ರಾಮೀಣಾಭಿವೃದ್ಧಿಯ ಉಪಕ್ರಮಗಳು : ಬಡತನ ನಿರ್ಮೂಲನೆ ಹಾಗೂ ಉದ್ಯೋಗ ಸೃಜನೆ ಕಾರ್ಯಕ್ರಮಗಳು, ಪಂಚವಾರ್ಷಿಕ ಯೋಜನೆ ಹಾಗೂ ಸೇರ್ಪಡೆಯ ಬೆಳವಣಿಗೆ (inclusive) ಗ್ರಾಮೀಣ ಹಣಕಾಸು ಸಂಸ್ಥೆಗಳು, ಗ್ರಾಮಗಳ ಸಾರ್ವಜನಿಕ ಸ್ವತ್ತುಗಳ ಅಭಿವೃದ್ಧಿ ಹಾಗೂ ರಕ್ಷಣೆ, ಹಳ್ಳಿಗಳ ಹುಲ್ಲುಗಾವಲುಗಳು ಹಾಗೂ ಅರಣ್ಯ , ಜಲಮೂಲಗಳು, ಗ್ರಾಮೀಮ ಪ್ರದೇಶದಲ್ಲಿ ನಗರ ಸೌಕರ್ಯ ಒದಗಿಸುವುದು (PURA), ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಗಳು, ಕರ್ನಾಟಕದಲ್ಲಿ ಸ್ವಸಹಾಯ ಗುಂಪುಗಳು ಹಾಗೂ ಸೂಕ್ಷ್ಮ ಹಣಕಾಸು ಸಂಸ್ಥೆಗಳು, ಕರ್ನಾಟಕದಲ್ಲಿ ಗ್ರಾಮೀಣ ಕೆರೆ ನಿರ್ವಹಣೆ , ಕುಡಿಯುವ ನೀರು, ನೈರ್ಮಲ್ಯ ಹಾಗೂ ಆರೋಗ್ಯ ರಕ್ಷಣೆಗಾಗಿ ಬಾಹ್ಯ ನೆರವು.

**ಪತ್ರಿಕೆ – 3 ಸಾಮಾನ್ಯ ಅಧ್ಯಯನ ಪತ್ರಿಕೆ – 2**

**ಭಾಗ 1 – ಭೌಗೋಳಿಕ ಲಕ್ಷಣಗಳು ಹಾಗೂ ನೈಸರ್ಗಿಕ ಸಂಪನ್ಮೂಲಗಳು ವಿಶ್ವ ಭೂಗೋಳ**

**1) ಭೂಮಂಡಲ :** ಸೌರವ್ಯೂಹದಲ್ಲಿ ಭೂಮಿಯ ಸ್ಥಾನ. ಶಿಲೆಗಳು, ಭೂಕಂಪ, ಜ್ವಾಲಾಮುಖಿ, (Plate tectonics) (ವಿವರ್ತ ಹರಿವಾಣ), ಸವಕಳಿಗೆ ಕಾರಣವಾಗುವ ಅಂಶಗಳು, ವಾತಾವರಣ – ರಚನೆ ಹಾಗೂ ಸಂಯೋಜನೆ, ಹವಾಮಾನ ಮತ್ತು ವಾಯುಗುಣದ ಅಂಶಗಳು, ವಾಯುಗುಣದ ವಿಶಾಲ ವಿಧಗಳು, ಜಲಮಂಡಲ : ಪ್ರಪಂಚದ ಸಾಗರಗಳ ಲವಣತೆ, ಸಾಗರ ಪ್ರವಾಹಗಳು ಹಾಗೂ ಉಬ್ಬರವಿಳಿತಗಳು ಸಾಗರ ನಿಕ್ಷೇಪಗಳು.

**2)ಖಂಡಗಳ ಭೌತಿಕ ಸ್ಥಿತಿ ಹಾಗೂ ಜನವಸತಿಯ ಹಂಚಿಕೆ :** ಪರ್ವತಗಳು, ನದಿಗಳು, ಅರಣ್ಯಗಳು, ಹುಲ್ಲುಗಾವಲುಗಳು, ಮರುಭೂಮಿ, ಜನಾಂಗೀಯ ಪ್ರಭೇದಗಳು, ಜನಸಂಖ್ಯಾ ಬದಲಾವಣೆ, ಹಂಚಿಕೆ ಹಾಗೂ ಜನಸಂಖ್ಯಾ ಪರಿವರ್ತನೆ, ಜನಸಾಂದ್ರತೆ, ಲಿಂಗಾನುಪಾತ, ಜೀವನ ಗುಣಮಟ್ಟ, ಜೀವಿತಾವಧಿ, ಸಾಕ್ಷರತೆ, ಜೀವನಮಟ್ಟ ಹಾಗೂ ವಲಸೆ.

**3) ಭಾರತ ಪ್ರಾಕೃತಿಕ ಲಕ್ಷಣ :** ಪ್ರಾಕೃತಿಕ ಪರಿಸರದ ವಾಯುಗುಣ ಹಾಗೂ ಮಣ್ಣು, ಸ್ವಾಭಾವಿಕ ಸಸ್ಯರಾಶಿ, ಖನಿಜ ಸಂಪತ್ತು , ಕಬ್ಬಿಣದ ದಿರು, ಮ್ಯಾಂಗನೀಸ್, ತಾಮ್ರ ಹಾಗೂ ಬಾಕ್ಸೈಟ್ , ಕಲ್ಲಿದ್ದಲು ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ, ಅಣು ಸಂಗ್ರಹ, ಪರಮಾಣು ನಿಕ್ಷೇಪಗಳು, ಪ್ರಮುಖ ಬೆಳೆಗಳು, ಬೇಳೆಕಾಳುಗಳ ಉತ್ಪಾದನೆ ಹಾಗೂ ಹಂಚಿಕೆ, ಧಾನ್ಯಗಳು, ಎಣ್ಣೆಕಾಳುಗಳು, ತೋಟಗಾರಿಕಾ ಬೆಳೆಗಳು, ವಾಣಿಜ್ಯ ಬೆಳೆಗಳು, ಭಾರತದ ಜನಸಂಖ್ಯೆ ಬೆಳವಣಿಗೆ – ಸಂಯೋಜನೆ, ಹಂಚಿಕೆ, ಜನಸಾಂದ್ರತೆ, ಮಾನವ ಅಭಿವೃದ್ಧಿ ಸೂಚ್ಯಂಕ, ಜನಸಂಖ್ಯಾ ದತ್ತಾಂಶ.

**4) ಕೈಗಾರಿಕಾ ಯೋಜನೆ ಹಾಗೂ ಅಭಿವೃದ್ಧಿ :** ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಹಂಚಿಕೆ ಭಾರತದ ಕೈಗಾರಿಕಾ ಪ್ರದೇಶಗಳು, ಕೈಗಾರಿಕಾ ಮೂಲ ಸೌಕರ್ಯ – ರೈಲ್ವೆ , ರಸ್ತೆ ಹಾಗೂಬಂದರುಗಳು, ಹಿಂದುಳಿದ ಪ್ರದೇಶಗಳು ಹಾಗೂ ಕೈಗಾರೀಕರಣ, ಪ್ರಾದೇಶಿಕ ಯೋಜನೆ ಹಾಗೂ ಅಭಿವೃದ್ಧಿ , ಬುಡಕಟ್ಟು ಹಾಗೂ ಗುಡ್ಡಗಾಡು ಪ್ರದೇಶಗಳು, ಬರಪೀಡಿತ ಪ್ರದೇಶಗಳು, ನದಿಮುಖಜ ಭೂಮಿಗಳು, ನಗರ ಹಗೂ ಪಟ್ಟಣಗಳ ವರ್ಗೀಕರಣ, ಮಹಾನಗರಗಳ ರಚನೆ.

**ಕರ್ನಾಟಕದ ಭೂಗೋಳ**

**5) ಪ್ರಕೃತಿ ಭೂಗೋಳದ ವಿಭಜನೆಗಳು :** ಹವಾಮಾನ, ನದಿಗಳು, ಮಳೆ ಹಂಚಿಕೆ, ನೈಸರ್ಗಿಕ ಸಸ್ಯವರ್ಗ ಹಾಗೂ ಮಣ್ಣು , ಬೇಸಾಯ ಹಾಗೂ ಕೃಷಿ ಹವಾಮಾನದ ಪ್ರದೇಶಗಳು ಪ್ರಮುಖ ಬೆಳೆಗಳು, ಕರ್ನಾಟಕದ ತೋಟಗಾರಿಕೆ ಹಾಗೂ ವಾಣಿಜ್ಯ ಬೆಳೆಗಳು, ಕರ್ನಾಟಕದ ಖನಿಜ ಸಂಪತ್ತು ಶಕ್ತಿ ಸಂಪನ್ಮೂಲಗಳು (ವಿದ್ಯುತ್‌ಷ ಔಷ್ಣೀಯ, ಸೌರ, ಅಣು ಹಾಗೂ ಗಾಳಿ) ಬೃಹತ್, ಮಧ್ಯಮ ಹಾಗೂ ಸಣ್ಣ ಪ್ರಮಾಮದ ಕೈಗಾರಿಕೆಗಳು, ಕೃಷಿ ಆಧಾರಿತ ಕೈಗಾರಿಕೆಗಳು, ಕರ್ನಾಟಕದಲ್ಲಿ ಸಾರಿಗೆ ಹಾಗೂ ಸಂಪರ್ಕ, ಭೌಗೋಳಿಕ ಮಾಹಿತಿ ವ್ಯವಸ್ಥೆ.

**6) ನಗರ ಭೂ ಬಳಕೆ ನೀತಿ ಹಾಗೂ ನಗರೀಕರಣ :** ಜನಸಂಖ್ಯಾ ಗುಣಲಕ್ಷಣಗಳು, ಸಾಕ್ಷರತೆ ಹಾಗೂ ನಗರೀಕರಣ, ಜನಸಂಖ್ಯಾ ಸಮಸ್ಯೆಗಳು ಹಾಗೂ ನೀತಿಗಳು, ಸಾಕ್ಷರತೆ ನಗರ ವರ್ಗೀಕರಣ, ಮಹಾನಗರ ಪ್ರಭಾವ, ಗ್ರಾಮೀಣ ಹಾಗೂ ನಗರಗಳ ಪರಿಮಿತಿ **(Fringe)**, ನಗರ ಬೆಳವಣಿಗೆ ಸಮಸ್ಯೆಗಳು, ಭೂ ಬಳಕೆ, ನಗರ ಯೋಜನೆ, ನಗರದಲ್ಲಿನ ಗೃಹ ಸೌಕರ್ಯ ಹಾಗೂ ಕೊಳಚೆ ಪ್ರದೇಶಗಳು, ದೇಶೀಯ ಹಾಗೂ ಅಂತರ್ ದೇಶೀಯ ವ್ಯಾಪಾರ ಹಾಗೂ ಪ್ರಾದೇಶಿಕ ಮಾರುಕಟ್ಟೆ ಕೇಂದ್ರಗಳ ಪಾತ್ರ.

**ಭಾಗ – II ಭಾರತದ ಸಂವಿಧಾನದ ಅವಲೋಕನ (7 ಘಟಕಗಳು)**

**1) ಸಂವಿಧಾನದ ಸ್ವರೂಪ :** ಸಂವಿಧಾನದ ಬೆಳವಣಿಗೆಗಳು, ಸಂವಿಧಾನದ ಲಕ್ಷಣಗಳು, ಪ್ರಸ್ತಾವನೆ (ಪೀಠಿಕೆ) ರಾಜ್ಯ ನೀತಿಯ ನಿರ್ದೇಶಕ ತತ್ವಗಳು, ಭಾರತದ ಒಕ್ಕೂಟ – ಇತ್ಯಾದಿ.

**2) ಮೂಲಭೂತ ಹಕ್ಕುಗಳು :** ಸಮಾನತೆಯ ಹಕ್ಕು , ಸ್ವಾತಂತ್ರ್ಯದ ಹಕ್ಕು , ಶೋಷಣೆಯ ವಿರುದ್ಧದ ಹಕ್ಕು , ಧಾರ್ಮಿಕ ಸ್ವಾತಂತ್ರ್ಯ , ಶೈಕ್ಷಮಿಕ ಮತ್ತು ಸಾಂಸ್ಕೃತಿಕ ಹಕ್ಕು , ಸಂವಿಧಾನಾತ್ಮಕ ಪರಿಹಾರದ ಹಕ್ಕುಗಳು, ಸಮಂಜಸ ನಿಯಂತ್ರಣಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರಿಗಿರುವ ಅವಕಾಶಗಳು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳಿಗಿರುವ ಮೀಸಲಾತಿಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯ ತಡೆಕಾಯ್ದೆ , ರಾಷ್ಟ್ರೀಯಹಾಗೂ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಆಯೋಗ.

**3) ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸನ ರಚನೆಯ ಅಧಿಕಾರಗಳ ಹಂಚಿಕೆ :** ರಾಜ್ಯ ಹಾಗೂ ಕೇಂದ್ರದ ನಡುವೆ ಆಡಳಿತಾತ್ಮಕ ಹಾಗೂ ಹಣಕಾಸಿನ ಸಂಬಂಧಗಳು, ಸಂವಿಧಾನಬದ್ಧ ಸಂಸ್ಥೆಗಳ ಅಧಿಕಾರಗಳು ಹಾಗೂ ಕಾರ್ಯಗಳು,ರಾಜ್ಯಪಾಲರ ಅಧಿಕಾರ ಹಾಗೂ ಕರ್ತವ್ಯಗಳು, ಮಂತ್ರಿಮಂಡಲ ಹಾಗೂ ಕ್ಯಾಬಿನೆಟ್‌ಷ ನ್ಯಾಯಾಂಗ ಪರಿಹಾರಗಳು.

**4) ಏಕಸದನ ಹಾಗೂ ದ್ವಿಸದನ ಶಾಸಕಾಂಗಗಳು :** ಪ್ರಕಾರ್ಯಗಳು ಮತ್ತು ಉತ್ತರದಾಯತ್ವದ ಬಿಕ್ಕಟ್ಟು, ನಿಯೋಜಿತ ಶಾಸನಾಧಿಕಾರ, ಶಾಸನ ರಚನಾ ಪ್ರಕ್ರಿಯೆ ಹಾಗೂ ಶಾಸನ ಸಭೆ ಸಮಿತಿಗಳು, ನಿಯೋಜಿತ ಶಾಸನಾಧಿಕಾರದ ಮೇಲೆ ಶಾಸಕಾಂಗ ಹಾಗೂ ನ್ಯಾಯಾಂಗದ ನಿಯಂತ್ರಣ, ಆಡಳಿತಾತ್ಮಕ ಕಾರ್ಯದ ಮೇಲೆ ನ್ಯಾಯಾಂಗ ಪರಾಮರ್ಶೆ, ಭಾರತದ ಮಹಾ ಲೆಕ್ಕ ತಪಾಸಿಗ ಹಾಗೂ ನಿಯಂತ್ರಕ (ಸಿಎಜಿ) ಮತ್ತು ಭಾರತದ ಅಟಾರ್ನಿ ಜನರಲ್ (ಎ.ಜಿ.).

**5) ಕೇಂದ್ರ ಹಾಗೂ ರಾಜ್ಯದಡಿ ಬರುವ ಸೇವೆಗಳು** : ಸರ್ಕಾರಹಾಗೂ ಸಾರ್ವಜನಿಕ ಅಧಿಕಾರಿಗಳ ಸಂವಿಧಾನಿಕ ಉಪಬಂಧಗಳು.

**ಭಾಗ – III ಸಾರ್ವಜನಿಕ ಆಡಳಿತ ಹಾಗೂ ನಿರ್ವಹಣೆ – ಅಂತರರಾಷ್ಟ್ರೀಯ ಸಂಬಂಧಗಳು (7 ಘಟಕಗಳು)**

**1) ಖಾಸಗಿ ಹಾಗೂ ಸಾರ್ವಜನಿಕ ಆಡಳಿತ** : ಸಮಾಜದಲ್ಲಿ ಅದರಪಾತ್ರ ಕಲೆ ಹಾಗೂ ವಿಜ್ಞಾನವಾಗಿ ಸಾರ್ವಜನಿಕ ಆಡಳಿತ, ನೂತನ ಸಾರ್ವಜ ನಿಕ ಆಡಳಿತ ಹಾಗೂ ನೂತನ ಸಾರ್ವಜನಿಕ ನಿರ್ವಹಣೆ, ಜವಾಬ್ದಾರಿಯುತ ಆಡಳಿತ, ಆಡಳಿತ ಹಾಗೂ ನಿರ್ವಹಣೆ ನಡುವಿನ ವ್ಯತ್ಯಾಸಗಳು, ಖಾಸಗಿ ಹಾಗೂ ಸಾರ್ವಜನಿಕ ಆಡಳಿತ ನಡುವಿನ ವ್ಯತ್ಯಾಸಗಳು.

**2) ಸಂಸ್ಥೆಯ ಸಂರಚನೆ** : ವೈಯಕ್ತಿಕ ಹಣಕಾಸಿನ ಆಡಳಿತಾತ್ಮಕ ಶಾಸನ, ಕಾನೂನು ಹಾಗೂ ಸುವ್ಯವಸ್ಥೆಯ ನಿರ್ವಹಣೆ, ಜನರ ಯೋಗಕ್ಷೇಮಕ್ಕಾಗಿ ಆಡಳಿತ, ಭಾರತದ ಆಡಳಿತದಲ್ಲಿನ ವಿವಿಧಾಂಶಗಳು. ಅಭಿವೃದ್ಧಿ ಆಡಳಿತ.

**3) ಸಂಘಟನಾ ವರ್ತನೆ ಹಾಗೂ ನಿರ್ವಹಣಾ ಪರಿಕಲ್ಪನೆಗಳು** : ಸಂಸ್ಥೆಯ ಸಂರಚನೆ, ವ್ಯವಸ್ಥೆಗಳು, ವಿಧಾನಗಳು, ಕೌಶಲಗಳು, ನೀತಿಗಳು ಹಾಗೂ ಉದ್ದೇಶಗಳು, ನಿರ್ಧಾರ ತೆಗೆದುಕೊಳ್ಳುವುದು, ಸಂಪರ್ಕ, ಕೇಂದ್ರೀಕರಣ, ವಿಕೇಂದ್ರೀಕರಣ, ಅಧಿಕಾರದ ನಿಯೋ ಜನೆ, ಹೊಣೆಗಾರಿಕೆ, ನಿಯಂತ್ರಣ.

**4) ಔಪಚಾರಿಕ ಹಾಗೂ ಅನೌಪಚಾರಿಕ ಸಂಘಟನೆ** : ಕಾರ್ಯಾತ್ಮಕ ನಿರ್ವಹಣೆ, ಹಣಕಾಸು, ಮಾನವ ಸಂಪನ್ಮೂಲ, ಮಾರುಕಟ್ಟೆ, ಉತ್ಪಾದನೆ, ನಾಯಕತ್ವ ಹಾಗೂ ಪ್ರೇರಣೆ.

**5) ನಿರ್ವಹಣಾ ಸಾಧನಗಳು ಹಾಗೂ ತಂತ್ರಗಳು** : ಅನಿಶ್ಚಿತತೆ ಸಂದರ್ಭದಲ್ಲಿ ತೀರ್ಮಾನ ತೆಗೆದುಕೊಳ್ಳುವುದು.

**PERT 7 CPM, PIME, POSD - CORB, SWOT** ಗಳ ವಿಶ್ಲೇಷಣೆ, ಸಾಧನೆಯ ಮಟ್ಟ ಹಾಗೂ ಅಂದಾಜು, **PDCA** ಚಕ್ರ, ವೈಯುಕ್ತಿಕ ನೀತಿಗಳು, ಮಾನವಶಕ್ತಿ ನೀತಿ ಹಾಗೂ ಯೋಜನೆ, ತರಬೇತಿ ಹಾಗೂ ಅಭಿವೃದ್ಧಿ ಸಂಘರ್ಷ ನಿರ್ವಹಣೆ, ಬದಲಾವಣೆ ಹಾಗೂ ಅಭಿವೃದ್ಧಿಯ ನಿರ್ವಹಣೆ, ತಂಡ ರಚನೆ, ಗುಣಾತ್ಮಕ ಸಲಕರಣೆಗಳು ( ಮಿದುಳು ಚುರುಕುಗೊಳಿಸುವುದು. ಸಾಮಾನ್ಯ ಗುಂಪು ತಂತ್ರ, ಪ್ಯಾರೆಟೊ ಚಾರ್ಟ್, ಫಿಶ್‌ಬೋನ್ ಚಿತ್ರ ಹಾಗೂ ಹಂತಗಳ (ಪ್ರೊಸೆಸ್) ಪಟ.

**6) ಆಡಳಿತ ಸುಧಾರಣೆ** : ಸಾರ್ವಜನಿಕ ಸೇವೆಯಲ್ಲಿ ಎಐತಿಕತೆ ಹಾಗೂ ಮೌಲ್ಯಗಳು, ಸಾರ್ವಜನಿಕ ಸಂಬಂಧಗಳು, ಒಳ್ಳೆಯ ಆಡ ಳಿತ ಉತ್ತರಾಯಿತ್ವ ಹಾಗೂ ನಿಯಂತ್ರಣ, ಕಾರ್ಯಕ್ರಮ ನಿರ್ವಹಣೆ ಹಾಗೂ ಮೌಲ್ಯಮಾಪನ, ಲೋಕಪಾಲ ಹಾಗೂ ಲೋಕಾ ಯುಕ್ತ, ಸಾರ್ವಜನಿಕ ಕುಂದುಕೊರತೆಗಳ ಪರಿಹಾರ, ಜಿಲ್ಲಾಡಳಿತ ಹಾಗೂ ಪಂಚಾಯತ್ ರಾಜ್, ಕಾನೂನು ಸುವ್ಯವಸ್ಥೆಹಾಗೂ ಅಭಿ ವೃದ್ಧಿಕಾರ್ಯಗಳು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ಇರುವ ಕಲ್ಯಾಣ ಕಾರ್ಯಕ್ರಮಗಳು, ಜನರ ಭಾಗವಹಿಸುವಿಕೆ, ಆಡಳಿತಸುಧಾರಣಾ ಆಯೋಗಳು, ಕೇಂದ್ರ ಹಾಗೂ ರಾಜ್ಯ.

**7) ವಿಶ್ವಸಂಸ್ಥೆ ಹಾಗೂ ವಿಶೇಷ ಸಂಸ್ಥೆಗಳು (ನಿಯೋಗಗಳು)** : ಇತರ ಅಂತರ ರಾಷ್ಟ್ರೀಯ ಸಂಘಟನೆಗಳು ಹಾಗೂ ಸಂಸ್ಥೆಗಳು, ವಿಶ್ವ ಸಂಸ್ಥೆಯ ಉಗಮ ಹಾಗೂ ಬೆಳವಣಿಗೆ, ಅಂತರರಾಷ್ಟ್ರೀಯ ಸಂಬಂಧದಲ್ಲಿ ಅದರ ಪಾತ್ರ ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಆರ್ಥಿಕ ಹಾಗೂ ಸಾಮಾಜಿಕ ಸಂಸ್ಥೆ, ವಿಶ್ವಸ್ಥ ಸಮಿತಿ, ಅಂತರರಾಷ್ಟ್ರೀಯ ನ್ಯಾಯಾಲಯ, ವಿಶ್ವಸಂಸ್ಥೆ ಹಾಗೂ ಶಾಂತಿಪಾನೆ ಪಡೆ, ಕಾರ್ಯಾಚರಣೆ, ವಿಶ್ವಸಂಸ್ಥೆ ನಿಶ?ೀಕರಣ, ವಿಶ್ವಸಂಸ್ಥೆ ಭವಿಷ್ಯ , ವಿಶೇಷ ಸಂಸ್ಥೆಗಳು (ನಿಯೋಗಗಳು) – ವಿಶ್ವ ಆರೋಗ್ಯ ಸಂಸ್ಥೆ (**WHO**), ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ (**ILO**) , ಆಹಾರ ಹಾಗೂ ಕೃಷಿ ಸಂಘಟನೆ (**FAO**) ಇತ್ಯಾದಿ.ಅಂತರ ರಾಷ್ಟ್ರೀಯ ಹಣಕಾಸಿನ ಸಂಸ್ಥೆ(**IMF**), ವಿಶ್ವಬ್ಯಾಂಕ್, ಏಶಿಯಾ ಅಭಿವೃದ್ಧಿ ಬ್ಯಾಂಕ್, ವಿಶ್ವ ವ್ಯಾಪಾರ ಸಂಘಟನೆ (**WTO**), ಯೂರೋಪಿನ ಒಕ್ಕೂಟ, ಆಶಿಯಾನ್, ಸಾರ್ಕ್ (ದಕ್ಷಿಣ ಏಶಿಯಾದ ಪ್ರಾದೇಶಿಕ, ಸಾಂಸ್ಕೃತಿಕ ಸಂಘಟ ನೆ), ಏಶಿಯಾ ಒಕ್ಕೂಟ,

ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಘಟನೆ (NATO) ಯಂತಹ ಅಂತರರಾಷ್ಟ್ರೀಯ ಸಂಘಟನೆಗಳು. ಅಂತರರಾಷ್ಟ್ರೀಯ ಸಂಬಂಧ ಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಪಾತ್ರ ಭಾರತ ಮತ್ತು ಅದರ ನೆರೆಹೊರೆಯ ದೇಶಗಳು.

**ಪತ್ರಿಕೆ – 4 ಸಾಮಾನ್ಯ ಅಧ್ಯಯನ ಪತ್ರಿಕೆ – 3**

**ಭಾಗ - I ಭಾರತದ ಅಭಿವೃದ್ಧಿಯಲ್ಲಿ ವಿಜ್ಞಾನ – ತಂತ್ರಜ್ಞಾನದ ಪಾತ್ರಹಾಗೂ ಪ್ರಭಾವ**

**1) ವಿಜ್ಞಾನ ಹಾಗೂ ತಂತ್ರಜ್ಞಾನದ ಮೂಲಗಳು**

★ ವಿಜ್ಞಾನ ಹಾಗೂ ತಂತ್ರಜ್ಞಾನದ ಅಭಿಜಾತ ಮತ್ತು ನೂತನವಾಗಿ ಹೊರಹೊಮ್ಮುವ ಕ್ಷೇತ್ರಗಳು.

★ ವಿಜ್ಞಾನ ಹಾಗೂತಂತ್ರಜ್ಞಾನದಿಂದ ಮೌಲ್ಯ ವರ್ಧನೆ.

★ ಪ್ರಚಲಿತ ವಿಜ್ಞಾನ ಹಾಗೂ ತಂತ್ರಜ್ಞಾನದಿಂದ ಭಾರತದಲ್ಲಿನ ಬೆಳವಣಿಗೆ ಹಾಗೂ ರಾಷ್ಟ್ರಾಭಿವೃದ್ಧಿಯಲ್ಲಿ ವಿಜ್ಞಾನ ಹಾಗೂ ತಂತ್ರ ಜ್ಞಾನದ ಪ್ರಾಮುಖ್ಯತೆ.

★ ಕೈಗಾರಿಕಾ ಬೆಳವಣಿಗೆ ಹಾಗೂ ನಗರೀಕರಣ.

★ ವಿಜ್ಞಾನ ಹಾಗೂ ತಂತ್ರಜ್ಞಾನಕ್ಕಾಗಿರುವ ರಾಷ್ಟ್ರೀಯ ನೀತಿ, ಕಾಲದಿಂದ ಕಾಲಕ್ಕೆ ನೀತಿಯ ಬದಲಾವಣೆ. ತಂತ್ರಜ್ಞಾನ ನಿಯೋಗ ಗಳು – ಐಸಿಟಿ : ಮೂಲ ಗಣಕಯಂತ್ರ, ಸಂಪರ್ಕ, ದೂರವಾಣಿ ಮತ್ತು ದೂರದರ್ಶನ – ಬ್ರಾಡ್‌ಬ್ಯಾಂಕ್ , ಅಂತರ್‌ಜಾಲ ಮತ್ತು ವೆಬ್. ಐಟಿ ಕೈಗಾರಿಕೆಗಳು, ಬಿಪಿಒ, ಆರ್ಥಿಕ ಹಾಗೂ ಉದ್ಯೋಗದಲ್ಲಿ ಬೆಳವಣಿಗೆ. ಇ – ಆಡಳಿತ, ಇ–ವಾಣಿಜ್ಯ ಮತ್ತು ಇ – ಕಲಿಕೆ – ಐಟಿ ಮತ್ತು ಅದರ ಗ್ರಾಮೀಣ ಬಳಕೆ. ಡಿಜಿಟಲ್ ಡಿವೈಡ್ ಮತ್ತು ಅದರ ನಿರ್ಮೂಲನೆ – ಸಮೂಹ ಮಾಧ್ಯಮದಲ್ಲಿ ಗಣಕ ಯಂತ್ರಗಳ ಬಳಕೆ.

**2) ಬಾಹ್ಯಾಕಾಶ ವಿಜ್ಞಾನ ಹಾಗೂ ತಂತ್ರಜ್ಞಾನ**

★ ಜಾಗತಿಕ ಬಾಹ್ಯಾಕಾಶ ಕಾರ್ಯಕ್ರಮಗಳ ಸಂಕ್ಷಿಪ್ತ ಇತಿಹಾಸ ಮತ್ತು ಇತ್ತೀಚಿನ ವಿದ್ಯಮಾನಗಳು.

★ ಭಾರತದಲ್ಲಿಬಾಹ್ಯಾಕಾಶ ಕಾರ್ಯಕ್ರಮಗಳು : INSAT, IRS ವ್ಯವಸ್ಥೆಗಳು, EDUSATಹಾಗೂ ಚಂದ್ರಯಾನ – 1 ಹಾಗೂ ಭವಿಷ್ಯದ ಕಾರ್ಯಕ್ರಮಗಳು.

★ ಭಾರತದಲ್ಲಿ ಶಿಕ್ಷಣ, ಕೃಷಿಹಾಗೂ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಾಹ್ಯಾಕಾಶ ತಂತ್ರಜ್ಞಾನದ ಅಳವ ಡಿಸಿಕೊಳ್ಳುವಿಕೆ.

**3) ಶಕ್ತಿ ಸಂಪನ್ಮೂಲಗಳು**

★ ಭಾರತದ ಇಂಧನ ಮೂಲಗಳ ನೋಟ : ಜಲ ವಿದ್ಯುತ್‌ಷ ಉಷ್ಣ ವಿದ್ಯುತ್, ಅಣುಶಕ್ತಿ. ನವೀಕರಿಸಬಹುದಾದ ಇಂಧನ ಮೂಲಗಳು, ಅವುಗಳ ಪ್ರಮಾಣ, ಅವುಗಳನ್ನು ಚಾಲನಾ ಶಕ್ತಿಯಾಗಿ ಬಳಸಿಕೊಳ್ಳಲಿರುವ ಅವಕಾಶ.

★ ನವೀಕರಿಸಬಹುದಾದ ಸಂಪನ್ಮೂಲಗಳ ಪ್ರಾಮುಖ್ಯತೆ : ಸೌರಶಕ್ತಿ, ಗಾಳಿ, ಜಲ (ಚಿಕ್ಕ ಮಧ್ಯಮ, ಬೃಹತ್) ಜೈವಿಕ ತ್ಯಾಜ್ಯಾಧಾ ರಿತ ಗಾಳಿ, ಭೂಉಷ್ಣ, ಹೈಡ್ರೋಜನ್ ಹಾಗೂ ಇಂಧನ ಕೋಶಗಳು.

★ ಇಂಧನ ಕ್ಷೇತ್ರ ಬಲಗೊಳಿಸುವ ಶಾಸನಗಳು,ಹಣಕಾಸಿನ ಹಾಗೂ ಕ್ರಮಬದ್ಧಪ್ರೋತ್ಸಾಹಗಳು, ಹೂಡಿಕೆದಾರರಿಗೆ ವ್ಯವಹಾರಿಕ ಅವಕಾಶಗಳು.

**4) ವಿಪತ್ತುಗಳು, ರೋಗಕಾರಕ ಕೀಟಗಳು ಹಾಗೂ ಮಾಲಿನ್ಯ**

★ ಹವಾಮಾನ ಬದಲಾವಣೆ : ಪ್ರವಾಹ, ಚಂಡಮಾರುತ, ಸುನಾಮಿ, ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ವಿಪತ್ತುಗಳು, ವಿಪತ್ತು ನಿರ್ವಹಣೆ.

★ ಭಾರತದಲ್ಲಿ ಬೆಳೆ ವಿಆನ, ರಸಗೊಬ್ಬರ, ಸಸ್ಯಕೀಟ ನಿಯಂತ್ರಣ ಹಾಗೂ ಬೆಳೆ ರೋಗಗಳ ನಿಯಂತ್ರಣ

★ ಸುರಕ್ಷಿತ ಕುಡಿಯುವ ನೀರು ಹಾಗೂ ಪೂರೈಕೆ

★ ನೈರ್ಮಲ್ಯ ಹಾಗೂ ತ್ಯಾಜ್ಯ ವಿಲೇವಾರಿ.

★ ನಗರೀಕರಣ, ಕೈಗಾರೀಕರಣ ಹಾಗೂ ಪರಿಸರ ನಿಯಂತ್ರಣ.

**5) ಸಂಬಂಧಪಟ್ಟ ಗ್ರಹಿಕೆಗಳು**

★ ವಿಜ್ಞಾನ – ತಂತ್ರಜ್ಞಾನ ಸಾಕ್ಷರತೆಯನ್ನು ಸಾರ್ವತ್ರಿಕಗೊಳಿಸುವುದು

★ ಮಾನವೀಯ ಮುಖದ ತಂತ್ರಜ್ಞಾನ

★ ಮಾನವ ಅಭಿವೃದ್ಧಿ ಸೂಚ್ಯಂಕ (HDI)

★ ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆಗೆ ಕೊಡುಗೆ (GDP)

★ಜಾಗತಿಕ ಸ್ಪರ್ಧೆ ಎದುರಿಸುವುದು

★ ಸಂಸ್ಕೃತಿ ಹಾಗೂ ದೇಶೀಯ ಜ್ಞಾನದ ಸಂರಕ್ಷಣೆ ಹಾಗೂ ಉತ್ತೇಜನ

**6) ಜ್ಞಾನ ಸಮಾಜ**

★ ಮಾನವ ಬಂಡವಾಳ, ಅದರ ಶಕ್ತಿ, ಶಿಕ್ಷಣ ನೀಡಿಕೆ, ಕೌಶಲ ಹಾಗೂ ಮೌಲ್ಯಗಳು.

★ ಆರ್ಥಿಕ ಬೆಳವಣಿಗೆಯಲ್ಲಿ ಜ್ಞಾನದ ಪಾತ್ರ, ಸಾಮಾಜಿಕ ಅಭಿವೃದ್ಧಿ, ಸಾಂಸ್ಕೃತಿಕ ಬಲಗೊಳ್ಳುವಿಕೆ ಹಾಗೂ ರಾಜಕೀಯ ಸಬಲೀಕರಣ.

★ ಜ್ಞಾನ ಸಂಬಂಧ ಗುರಿಗಳನ್ನು ಸಾಧಿಸುವುದು : ಬಡತನ ನಿರ್ಮೂಲನೆ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ಲಿಂಗಸಮಾನತೆ.

**7) ಗ್ರಾಮಬಲವರ್ಧನೆ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ**

★ ಗ್ರಾಮೀಣ ಭಾಗದಲ್ಲಿ ಆಧುನಿಕ ಮೂಲ ಸೌಕರ್ಯಗಳು, ಭೌತಿಕ, ವಿದ್ಯುನ್ಮಾನ, ಜ್ಞಾನ ಹಾಗೂ ಆರ್ಥಿಕ ಸಂಪರ್ಕ

★ ಪ್ರಾದೇಶೀಕ ಭಾಷೆ : ICT ಯಲ್ಲಿ ಭಾಷಾ ಪ್ರಯೋಗ.

★ ತೋಟಗಾರಿಕೆ : ಸಂಶೋಧನೆ ಹಾಗೂ ಅಭಿವೃದ್ಧಿಯೊಂದಿಗೆ ಅಧಿಕ ಇಳುವರಿ ತಳಿಯ ಉತ್ಪಾದನೆ, ಹಣ್ಣು, ತರಕಾರಿ ಪರಿಷ್ಕರಣೆ, ಘಟಕ ಸ್ಥಾಪನೆ, ಮಾರುಕಟ್ಟೆ

★ ಕೃಷಿ ಆಹಾರ ಪರಿಷ್ಕರಣೆ : ಗ್ರಾಮಗುಚ್ಛ ಸ್ಥಾಪನೆ ಹಾಗೂ ಆಹಾರ ಸಂಗ್ರಹಣಾ ಘಟಕ ಸ್ಥಾಪನೆ. ಆಹಾರ ಪ್ಯಾಕೇಜ್ ಹಾಗೂ ಮಾರಾಟಗಾರಿಕೆ.

★ ಜೈವಿಕ ಇಂಧನಗಳ ಉತ್ಪಾದನೆ ಮತ್ತು ಸಂಗ್ರಹಣೆ

★ ವೈಜ್ಞಾನಿಕ ಮಳೆ ನೀರು ಕೊಯ್ಲು ಮಾಡುವುದು.

**ಭಾಗ – ii ನೈಸರ್ಗಿಕ ವಿಜ್ಞಾನ, ಜೀವ ವಿಜ್ಞಾನ, ಖುಷಿ ವಿSಆನ ಆಹೋಗ್ಯ ಹಾಗೂ ಸ್ವಚ್ಛತೆ ಕ್ಷೇತ್ರಗಳಲ್ಲಿ ಪ್ರಗತಿ ಮತ್ತು ಆಧುನಿಕ ಪ್ರವೃತ್ತಿಗಳು (7 ಘಟಕಗಳು)**

**1) ನೈಸರ್ಗಿಕ ವಿಜ್ಞಾನ**

★ ಸಸ್ಯಗಳು : ಫಲಸಲು ಸಸ್ಯಗಳು, ಅರಣ್ಯ ಪ್ರಭೇಧಗಳು, ಔಷಧೀಯ ಹಾಗೂ ಸುಗಂಧಿತ ಸಸ್ಯಗಳು, ಸಸ್ಯಗಳ ಉಪಯೋಗ ಗಳು ಹಾಗೂ ಮಾನವ ತುಷ್ಟಿಗುಣ (ಸಂಬಂಧ), ದ್ಯುತಿ ಸಂಶ್ಲೇಷಣೆ, ಭಾಷ್ಪವಿಸರ್ಜನೆ,ಹಾನಿಕಾರಕ ಸಸ್ಯಗಳು.

★ ಪ್ರಾಣಿಗಳ ಸಾಮಾನ್ಯ ವರ್ಗೀಕರಣ : ಸಾಕುಪ್ರಾಣಿ ಹಾಗೂ ಕಾಡು ಪ್ರಾಣಿಗಳು. ಪ್ರಾಣಿಗಳ ಉಪಯುಕ್ತತೆ ಹಾಗೂ ಮಾನವ ಸಂಬಂಧಿ ವ್ಯವಹಾರಗಳ ನಿತ್ಯೋಪಯುಕ್ತತೆ.

★ ಸೂಕ್ಷ್ಮ ಜೀವಿಗಳು : ಸಾಮಾನ್ಯ ಬ್ಯಾಕ್ಟೀರಿಯಾ, ವೈರಸ್, ಫಂಗೈ ಹಾಗೂ ಮನುಕುಲದ ಮೇಲೆ ಅವುಗಳ ಉಪಯುಕ್ತ ಹಾಗೂ ಹಾನಿಕಾರಕ ಪರಿಣಾಮ.

**2) ಕೃಷಿ ವಿಜ್ಞಾನ**

★ ಕೃಷಿ ವಿದ್ಯಮಾನ – ರಾಜ್ಯ – ರಾಷ್ಟ್ರ ಆರ್ಥಿಕತೆಯಲ್ಲಿ ಕೃಷಿಯಪ್ರಾಮುಖ್ಯತೆ. ಬೆಳೆಗಳ ಉತ್ಪಾದನೆ ಹಾಗೂ ಸಂರಕ್ಷಣೆ. ರಸಾಯನಿಕಗೊಬ್ಬರಗಳು, ವರ್ಮಿ ಕಾಂಪೊಸ್ಟ್, ಕೃಷಿಹೂಡಿಕೆಯ ವೆಚ್ಚ ಮತ್ತು ಲಾಭದ ಕುರಿತಾಗಿ ವಿಶ್ಲೇಷಣೆ. ಉತ್ಪಾದನೆ, ಉತ್ಪಾದಕ, ವಿಸ್ತರಣೆಗಾಗಿ ಕಾರ್ಯಕ್ರಮಗಳು. ಹಸಿರು, ಬಿಳಿ, ಹಳದಿ, ನೀಲಿ ಕ್ರಾಂತಿಗಳು.

★ ಜಮೀನಿನಲ್ಲಿ ಸಾವಯವ ಕೃಷಿಯಲ್ಲಿನ ಇತ್ತೀಚಿನ ಬದಲಾವಣೆ ಹಾಗೂ ಕೃಷಿ ತಂತ್ರಗಾರಿಕೆ. ಕೃಷಿ ಪದ್ಧತಿಗಳು ಹಾಗೂ ಸುಸ್ಥಿರತೆ, ಕೃಷಿಪ್ರಕ್ರಿಯೆ ಹಾಗೂ ಕೃಷಿ ಆಧರಿತ ಕೈಗಾರಿಕೆಗಳು. ಕೊಯ್ಲಿನ ನಂತರ ತಂತ್ರಜ್ಞಾನ ಹಾಗೂ ಮೌಲ್ಯ ಸೇರ್ಪಡೆ, ಜಮೀನು ನಿರ್ವಹಣೆ ಹಾಗೂ ಜಲಸಂಪನ್ಮೂಲಗಳು.

**3) ತೋಟಗಾರಿಕೆ ಹಾಗೂ ರೇಷ್ಮೆಕೃಷಿ**

★ ತೋಟಗಾರಿಕೆ ಮಹತ್ವ : ಹೂ ಬೆಳೆ, ತರಕಾರಿ, ಹಣ್ಣುಗಳು, ತೋಟಗಾರಿಕೆ ಬೆಳೆ, ಸಾಂಬಾರು, ಬೆಳೆ, ಔಷಧೀಯ ಹಾಗೂ ಸುಗಂಧಿ ಸಸ್ಯಗಳು. ಆಧುನಿಕ ತಂತ್ರಜ್ಞಾನದ ತೋಟಗಾರಿಕೆ, ಕೊಯ್ಲೋತ್ತರ ನಿರ್ವಹಣೆ ಹಾಗೂ ಮೌಲ್ಯವೃದ್ಧಿ , ತೋಟಗಾರಿಕಾ ಬೇಸಾಯಕ್ಕೆ ವಿಶೇಷ ಪ್ರೇರಣಾತ್ಮಕ ಕಾರ್ಯಗಳು.

★ರೇಷ್ಮೆ ಕೃಷಿ : ಭಾರತ ಹಾಗೂ ಕರ್ನಾಟಕದಲ್ಲಿ ರೇಷ್ಮೆ ಸಾಕಾಣಿಕೆಯ ಪ್ರಾಮುಖ್ಯತೆ, ಮಲ್‌ಬೆರಿ ಹಾಗೂ ಮಲ್‌ಬೆರಿಯೇತರ ರೇಷ್ಮೆ ಕೃಷಿ ಹಂಚಿಕೆ (ವ್ಯಾಪ್ತಿ ಉತ್ಪಾದನೆ ಮತ್ತು ಉತ್ಪಾದಕತೆ), ಕೂಕಾನ್ ಉತ್ಪಾದನೆ.

**4) ಜೈವಿಕ ತಂತ್ರಜ್ಞಾನದ ಉಪಕ್ರಮಗಳು** : : ಜೈವಿಕ ತಂತ್ರಜ್ಞಾನದ ಪಕಿಲ್ಪನೆ, ಜೆನೆಟಿಕ್ ಇಂಜಿನಿಯರಿಂಗ್ ಮತ್ತು ಆಕರಕೋಶ (ಸ್ಟೆಮವಸೆಲ್)ಗಳ ಸಂಶೋಧನೆಯಪರಿಚಯ ಮತ್ತು ಅಳವಡಿಕೆ, ಅಣು ತಳಿವೃದ್ಧಿ ಮತ್ತು ಮಾರ್ಕಲ್ ಮೂಲಕ ಆಯ್ಕೆ. ಕುಲಾಂತರಿ (ಟಾರನ್ಸ್‌ಜೆನಿಕ್) ಸಸ್ಯಗಳು (ಅನುವಂಶೀಕತೆಯ ಪ್ರಯೋಜನಕಾರಿ ಮತ್ತುಹಾನಿಕಾರಕ ಪರಿಣಾಮಗಳು. ಕೃಷಿಲ್ಲಿಜೈವಿಕತಂತ್ರಜ್ಞಾನ (ಜೈವಿಕ ರಾಸಾಯನಿಕಗೊಬ್ಬರಗಳು ಜೈವಿಕ ಕೀಟನಾಶಕಗಳು, ಜೈವಿಕ – ಇಂಧನಗಳು, ಅಂಗಾಂಶ ಕೃಷಿ, ತದ್ರೂಪಿ ಸೃಷ್ಟಿ(ಕ್ಲೋನಿಂಗ್) ಆಹಾರ ಜೈವಿಕ ತಂತ್ರಜ್ಞಾನ, ಆಹಾರ ಸುರಕ್ಷತೆ ಮತ್ತು ಸೂಕ್ಷ್ಮ ಜೀವಿಯ ಪ್ರಮಾಣಕಗಳು ಆಹಾರದ ಗುಣಮಟ್ಟ ಪ್ರಮಾಣಗಳು, ಆಹಾರ ಕಾನೂನು ಮತ್ತು ನಿಯಮಗಳು.

**5. ಪಶಿಸಂಗೋಪನೆ (ಪಶುವೈದ್ಯ, ಹೈನುಗಾರಿಕೆ ಮತ್ತು ಮೀನುಗಾರಿಕೆ ವಿಜ್ಞಾನಗಳು)**

ರಾಷ್ಟ್ರ– ರಾಜ್ಯ ಅರ್ಥವ್ಯವಸ್ಥೆಯಲ್ಲಿಪಶುಸಂಗೋಪನೆಯ ಪ್ರಾಮುಖ್ಯತೆ, ವಿದೇಶಿಯ ಮತ್ತು ಭಾರತದ ಪ್ರಮುಖತಳಿಗಳು – ದನ, ಕುರಿ, ಆಡು, ಕೋಳಿ, ಹಂದಿ ಇತ್ಯಾದಿ. ಹಾಲು ಉತ್ಪಾದನಾ ನಿರ್ವಹಣೆ ಹಾಗೂ ಹೈನುಗಾರಿಕೆ ಅಭಿವೃದ್ಧಿ, ಹಾಲು ಉತ್ಪಾದಕರ ಸಹ ಕಾರ ಸಂಘಗಳು ಹಾಗೂಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಅವುಗಳ ಪಾತ್ರ – ಅಮುಲ್, ಕೆ.ಎಂ.ಎಫ್.

ಭಾರತದಲ್ಲಿ ಮೀನುಗಾರಿಕೆ ಸಂಪನ್ಮೂಲಗಳು, ಕಡಲು ಮೀನುಗಾರಿಕೆ ಸಂಪನೂಾಮಲಗಳು ಮತ್ತು ಸಾಮರ್ಥ್ಯ, ಭಾರತದ ವಿಶೇಷ ಆರ್ಥಿಕ ವಲಯ, ತೀರ ಮೀನುಗಾರಿಕೆ ಹಾಗೂ ಸಾಗರ ಅಭಿವೃದ್ಧಿ , ಒಳನಾಡು ನೀರಿನ ಸಂಪನ್ಮೂಲಗಳು, ವಾಣಿಜ್ಯೀಕರಣಕ್ಕೆ ಚಿವಾಣಿಜ್ಯಾಧಾರಿತ ಮೀನುಗಾರಿಕೆ, ಜವಾಬ್ದಾರಿಯುತ ಮೀನುಗಾರಿಕೆ, ಅಲಂಕಾರಿಕ ಮೀನು ಉತ್ಪಾದನೆ, ಪಶುಸಂಗೋಪನೆ ಮೌಲ್ಯವೃದ್ಧಿ, ಹಾಗೂ ಗುಣಮಟ್ಟ ನಿಯಂತ್ರಣ :

**6. ಕೃಷಿ ಅಭಿವೃದ್ಧಿ ಕಾರ್ಯ ನೀತಿಗಳು, ಕಾರ್ಯಕ್ರಮಗಳು ಹಾಗೂ ವ್ಯಾಪಾರ :**

ರಾಷ್ಟ್ರೀಯಹಾಗೂ ಕರ್ನಾಟಕದ ಕೃಷಿ ನೀತಿಯ ಲಕ್ಷಣಗಳು, ಕೃಷಿ ಬೆಲೆ ನೀತಿ, ರಾಷ್ಟ್ರೀಯ ಬೀಜನೀತಿ, ಕೃಷಿ ಸಾಲ ನೀತಿ, ರಾಷ್ಟ್ರೀಯ ಕೃಷಿ ಸಂಶೋಧನಾ ವ್ಯವಸ್ಥೆ (**NARS - National Agricultural Research System**) ಭಾರತದಲ್ಲಿ ಕೃಷಿಕರ ಕಲ್ಯಾಣ ಕಾರ್ಯಕ್ರಮಗಳು, ಕೃಷಿಕ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು, ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಅಭಿವೃದ್ಧಿ ಕೃಷಿ ಮಾರುಕಟ್ಟೆ, ಬಲವರ್ಧನೆ, ಮೂಲ ಸೌಕರ್ಯ ಗ್ರೇಡಿಂಗ್, ಪ್ರಮಾಮೀಕರಣ, ಬೆಳೆ ವಿಮೆಯೋಜನೆ, ರಾಷ್ಟ್ರೀಯ ಕೃಷಿ.

ವಿಮೆ ಯೋಜನೆ (**National Agricultural Insurance Scheme - NAIS**), ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (**Weather BasedCropInsuranceScheme (WBCIS),**) ಆಹಾರ ಭದ್ರತೆ, ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳು, ರಫ್ತು ಆಧಾರಿತ ಕೃಷಿ, ಹೈನು, ತೋಟಗಾರಿಕಾ ಉತ್ಪನ್ನಗಳು, ಕೃಷಿಯ ವಾಣಿಜ್ಯೀಕರಣ, ಜಾಗತೀಕರಣ ವಿಶ್ವ ವ್ಯಾಪಾರ ಸಂಘಟನೆ (**WTO**) ಕೃಷಿ ಮೇಲಿನ ಒಡಂಬಡಿಕೆ **Agreement on Agriculture (AoA)**

**7. ಆರೋಗ್ಯ ಹಾಗೂ ನೈರ್ಮಲ್ಯ :**

ಮಾನವನ ಜೀರ್ಣಾಂಗ, ರಕ್ತಪರಿಚಲನೆ, ಉಸಿರಾಟ, ವಿಸರ್ಜನಾಂಗ ಹಾಗೂ ಸಂತಾನೋತ್ಪತ್ತಿ ವ್ಯವಸ್ಥೆ ಅಲೋಪತಿ, ಭಾರತೀಯ ವೈದ್ಯಪದ್ಧತಿ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ (**AYUSH**) **NRHM** ರಾಷ್ಟ್ರೀಯ **hiv** ಕಾರ್ಯಕ್ರಮ, ಕ್ಷಯಸಂಬಂಧ ಕಾರ್ಯಕ್ರಮ (**Preventive and Social Medicine** ವ್ಯಾಧಿ ನಿವಾರಕ ಹಾಗೂ ಸಾಮಾಜಿಕ ಔಷಧಿ, ರೋಗಗಳು, ಸೋಂಕು ರೋಗಗಳು, ಸಾಂಕ್ರಾಮಿಕ ರೋಗಗಳು, ಸ್ಥಳೀಯಕಾಯಿಲೆ, **Vecotr borne** ರೋಗಗಳು, ವಿವಿಧ ಸೂಕ್ಷ್ಮಾಣು ಜೀವಿಗಳಿಂದಾಗುವ ಸೋಂಕು ಬಗೆಗಿನ ಸಾಮಾನ್ಯ ಜ್ಞಾನ, ಗ್ಯಾಸ್ಟ್ರೋಎಂಟೆರಿಟೀಸ್, ಕಾಲರಾ, ಕ್ಷಯ, ಮಲೇರಿಯಾ, ವೈರಾಣು ರೋಗಗಳು, ಹೆಚ್ಐವಿ, ಮೆದುಳು ಸೋಂಕು, ಚಿಕನ್‌ಗುನ್ಯಾ, ಪಕ್ಷಿಜ್ವರ, ಡೆಂಗ್ಯು, ಸಾಂಕ್ರಾಮಿಕ ರೋಗ ನಿರೋಧಕ ಕ್ರಮಗಳು, ರೋಗನಿರೋಧಕ ಲಸಿಕೆ ಪರಿಚಯ, **DPT** ಉತ್ಪಾದನೆ ಹಾಗೂ ರೇಬಿಸ್ ಲಸಿಕೆ ಹಾಗು ಹೆಪೆಟೈಟೀಸ್ ಲಸಿಕೆ, ರೋಗ ಪತ್ತೆಯಲ್ಲಿ ಪ್ರತಿ ರಕ್ಷೆಯ ವಿಧಾನಗಳ ಅನ್ವಯನ, ಆರೋಗ್ಯ ಅರಿವು ಕಾರ್ಯಕ್ರಮಗಳು.

**ಭಾಗ – III ಪರಿಹಾರ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರಕ್ಕೆಸಂಬಂಧಿಸಿದಂತೆ ಸವಾಲುಗಳು ಹಾಗೂ ಅಭಿವೃದ್ಧಿ ವಿಷಯಗಳು (6 ಘಟಕಗಳು)**

1) ಪರಿಸರದ ಸಂಬಂಧಿ ಅಂಶಗಳು : ವೃದ್ಧಿ ಹಾಗೂ ರಕ್ಷಣೆ – ಅರಣ್ಯ ರಕ್ಷಣೆ ಮತ್ತು ಪರಿಸರವಾದ,ವನ್ಯಜೀವಿ ರಕ್ಷಣೆ, ಪ್ರೊಜೆಕ್ಟ್‌ಟೈಗರ್, ರಾಷ್ಟ್ರೀಯ ಉದ್ಯಾನಗಳುಹಾಗೂ ಪಕ್ಷಿಧಾಮಗಳು, ಅರಣ್ಯಪರಿಸರದ ಮೇಲೆ ಗಣಿಗಾರಿಕೆ ಪ್ರಭಾವ, ಕೆಂಪು ದತ್ತಾಂಶ ಪುಸ್ತಕ, ಅಳಿವಿನಂಚಿನಲ್ಲಿರುವ ಪ್ರಬೇಧಗಳು, ಪರಿಸರ ಪ್ರವಾಸೋದ್ಯಮ ಮತ್ತು ಯಾವುದೇ ಇತರೆ ತತ್ಸಂಬಂಧಿ ಪ್ರಚಲಿತ ವಿಷಯಗಳು.

2) ನೈಸರ್ಗಿಕ ಸಂಪನ್ಮೂಲಗಳು :ಅರಣ್ಯ ರಕ್ಷಣೆ ವಿಧಗಳು, ಅರಣ್ಯಹಾಗೂ ಸಂಪನ್ಮೂಲ ರಕ್ಷಣೆ, ಜಲಸಂಪತ್ತು – ಪ್ರವಾಹ, ಬರಗಾಲ ಸಂಭವಿಸುವುದು, ಜಲಸಂಪನ್ಮೂಲ ನಿರ್ವಹಣೆ, ಭೂ ಸಂಪತ್ತು , ಮಳೆ ನೀರು ಕೊಯ್ಲು, ಮೂಲಸೌಕರ್ಯ ಅಭಿವೃದ್ಧಿ – ಅಣೆಕಟ್ಟುಗಳು ರಸ್ತೆಗಳು, ರೈಲು, ಸೇತುವೆ,ಕೈಗಾರಿಕೆ, ನಗರೀಕರಣ ಹಾಗೂ ತ್ಯಾಜ್ಯ ನೀರಿನ ನಿರ್ವಹಣೆ. ಮಾನವ ಹಸ್ತಕ್ಷೇಪದಿಂದಾಗಿ ಭೂಸ್ವಾಧೀನ ಹಾಗೂ ಪುನರ್ವಸತಿ ಮತ್ತು ಇತರ ವಿಷಯಗಳು ಹಾಗೂ ಯಾವುದೇ ಇತರ ತತ್ಸಂಬಂಧಿತ ವಿಷಯಗಳು.

3) ಪರಿಸರ ವ್ಯವಸ್ಥೆ ಹಾಗೂ ಜೀವ ವೈವಿಧ್ಯತೆ : ಜೀವಪರಿಸ್ಥಿತಿ ಶಾಸ್ತ್ರ – ಜೀವಪರಿಸ್ಥಿತಿ ಶಾಸ್ತ್ರದ ಮೂಲ ಕಲ್ಪನೆಗಳು, ಜೀವಿ ವ್ಯವಸ್ಥೆ, ಆಹಾರ ಸರಪಳಿ, ಜೀವವೈವಿಧ್ಯತೆ ಹಾಗೂ ರಕ್ಷಣೆ, ಪ್ರಬೇಧ ರಕ್ಷಣೆಗೆ Hot spots of Biodiversity ವೈವಿಧ್ಯತೆಗೆ ಧಕ್ಕೆಗಳು, ಅರಣ್ಯಗಳ ಸುಸ್ಥಿರ ಅಭಿವೃದ್ಧಿ ಹಾಗೂ ನಿರ್ವಹಣೆ ಇತರ ಪ್ರಚಲಿತ ವಿಷಯಗಳು. IPR.

4) ಪರಿಸರ ಮಾಲಿನ್ಯ ಹಾಗೂ ಘನ ತ್ಯಾಜ್ಯ ನಿರ್ವಹಣೆ : ವಾಯುಮಾಲಿನ್ಯ, ಜಲಮಾಲಿನ್ಯ , ಭೂಮಾಲಿನ್ಯ, ಶಬ್ದ ಮಾಲಿನ್ಯ ಮತ್ತು ಪರಿಹಾರೋಪಾಯಗಳು. ಘನತ್ಯಾಜ್ಯ ನಿರ್ವಹಣೆ, ವಿಧಗಳು, ತೊಂದರೆಗಳು ಘನತ್ಯಾಜ್ಯದ ಪರಿಣಾಮ, ಪನರ್ಚಕ್ರ ಹಾಗೂ ಮರುಬಳಕೆ. ಇತರೆ ಪ್ರಚಲಿತ ವಿಷಯಗಳು. ಪರಿಸರ ಸಂರಕ್ಷಣಾ ಕಾಯ್ದೆ. ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ, ನೀರು, ನೀರು ಮಲಿನ Cess (ಶುಲ್ಕ) ಕಾಯ್ದೆ.

5) ಪರಿಸರ ಹಾಗೂ ಮಾನವನ ಆರೋಗ್ಯದ ಮೇಲೆ ಮಾಹಿತಿ ತಂತ್ರಜ್ಞಾನದ ಪ್ರಭಾವ. ಜಾಗತಿಕ ಪರಿಸರ ವಿಷಯಗಳಾದ ಹವಾಮಾನ ಬದಲಾವಮೆ. ಆಮ್ಲಮಳೆ, ಜಾಗತಿಕ ತಾಪಮಾನ. ಬಂಜರುಭೂಮಿಯನ್ನು ಉಪಯೋಗ ಸ್ಥಿತಿಗೆ ತರುವುದು (Wasteland reclamation) ಜಲ ನಿರ್ವಹಣೆ, ಸುಸ್ಥಿರ ಅಭಿವೃದ್ಧಿಗೆ ಜಲನಿರ್ವಹಣಾ ನೀತಿ, ನದಿಗಳ ಜೋಡಣೆ, ನೀರಿನ ಬಿಕ್ಕಟ್ಟು, ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದ ಪ್ರಚಲಿತ ವಿಷಯಗಳು.

6) ರಾಜ್ಯ ಸಮುದಾಯ – ನಾಗರಿಕ ಸಮಾಜ. ಅರಣ್ಯಗಳಜಂಟಿ ನಿರ್ವಹಣಾ ವ್ಯವಸ್ಥೆ, ಸಮುದಾಯದ ಪಾಲ್ಗೊಳ್ಳುವಿಕೆ ಅಭಿವೃದಿಧ , ಸ್ಥಳಾಂತರಹಾಗೂ ಪುನರ್ವಸತಿ, ವಿಪತ್ತು ನಿರ್ವಹಣೆ, ಅರಣ್ಯಗಳ ಸುಸ್ಥಿರ ಅಭಿವೃದ್ಧಿ . ಪ್ರವಾಹ, ಭೂಕಂಪ, ಬರಗಾಲ, ಸುನಾಮಿ, ಜಾಗತಿಕ ತಾಪಮಾನ (CFC) ಓಝೋನ್ ಪದರ, ಇಂಗಾಲ ಶೇಖರಣೆ.

**ಪತ್ರಿಕೆ – 5 ಸಾಮಾನ್ಯ ಅಧ್ಯಯನ ಪತ್ರಿಕೆ – 4**

**ವಿಭಾಗ – 1 ನೈತಿಕತೆ (Ethics)**

★ ನೈತಿಕತೆಯ ಅವಶ್ಯಕತೆ ಮಾನವನ ಚಟುವಟಿಕೆಯಲ್ಲಿ ನೈತಿಕತೆಯನ್ನು ನಿರ್ಧರಿಸುವ ಅಂಶಗಳು ಮತ್ತುಪರಿಣಾಮಗಳು, ನೈತಿಕತೆಯ ವಿವಿಧ ಮಗ್ಗಲುಗಳು, ಖಾಸಗಿ ಮತ್ತು ಸಾರ್ವಜನಿಕ ಸಂಬಂಧಗಳಲ್ಲಿ ನೈತಿಕತೆ.

★ ಸಾರ್ವಜನಿಕ ಆಡಳಿತದಲ್ಲಿ ನೈತಿಕತೆ, ಸದ್ಯದಸ್ಥಿತಿ ಮತ್ತು ಸಮಸ್ಯೆಗಳು, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ನೈತಿಕತೆ ಕುರಿತಾದ ಮಾನಸಿಕ ಹೊಯ್ದಾಟಗಳು, ಕಾನೂನುಗಳು, ನಿಯಮಗಳು, ನಿಯಂತ್ರಣಗಳು ಮತ್ತು ನೈತಿಕತೆಯ ಮಾರ್ಗದರ್ಶಕ ಶಕ್ತಿಯಾಗಿ ಅಂತರಾತ್ಮದ ಅರಿವು.

★ ಉತ್ತರದಾಯಿತ್ವ ಮತ್ತು ನೈತಿಕ ಆಡಳಿತ ನಿರ್ವಹಣೆ, ಆಡಳಿತದಲ್ಲಿ ನೈತಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಬಲಪಡಿಸುವುದು. ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ಹಣಕಾಸು ಪೂರೈಕೆಯಲ್ಲಿನ ಐತಿಹಾಸಿಕ ವಿಷಯಗಳು, ಕಾರ್ಪೊರೇಟ್ ಆಡಳಿತ.

★ ಸಾರ್ವಜನಿಕ ಸೇವೆಯ ಕಲ್ಪನೆ, ಆಡಳಿತ ತಾತ್ವಿಕ ತಳಹದಿ, ಸರ್ಕಾರದಲ್ಲಿ ಮಾಹಿತಿ ಹಂಚಿಕೊಳ್ಳುವುದು ಮತ್ತು ಪಾರದರ್ಶಕತೆ, ಮಾಹಿತಿ ಹಕ್ಕು , ನೈತಿಕತೆಯ ನಿಯಮಗಳು, ವರ್ತನೆಯ ನಿಯಮಗಳು, ಡನಾಗರಿಕ ಸನ್ನದುಗಳು, ಶ್ರಮ ಸಂಸ್ಕೃತಿ, ಸೇವೆಯ ಗುಣಮಟ್ಟ, ಸಾರ್ವಜನಿಕ ಹಣಕಾಸಿನ ಸದ್ಬಳಕೆ, ಭ್ರಷ್ಟಾಚಾರದ ಆಹ್ವಾನಗಳು.

★ ಮಾನವೀಯ ಮೌಲ್ಯಗಳು : ಶ್ರೇಷ್ಠ ನಾಯಕರ ಬದುಕು ಮತ್ತು ಬೋಧನೆಗಳಿಂದ ದೊರೆಯುವ ಪಾಠಗಳು, ಸುಧಾರಕರು, ಆಡಳಿತಗಾರರು, ಮೌಲ್ಯಗಳನ್ನು ತುಂಬುವಲ್ಲಿ ಕುಟುಂಬ, ಸಮಾಜ ಮತ್ತು ಶೈಕ್ಷಣಿಕ ಸಂಸ್ಥೆಗಳ ಪಾತ್ರ.

**ಭಾಗ – 2 ಪ್ರಾಮಾಣಿಕ ನಿಷ್ಠುರತೆ (Integrity)**

★ ಪ್ರಾಮಾಣಿಕ ನಿಷ್ಠುರತೆ, ನಿಷ್ಪಕ್ಷಪಾತತನ, ವಸ್ತು ನಿಷ್ಠತೆ, ಸಾರ್ವಜನಿಕ ಸೇವೆಗೆ ಸಮರ್ಪಣೆ, ಸಹಿಷ್ಣುತೆ ಮತ್ತು ದುರ್ಬಲ ವರ್ಗಗಳ ಜನರ ಬಗ್ಗೆ ಇರುವ ಮಾನವೀಯ ಅನುಕಂಪ.

**ಭಾಗ – 3 : ನಾಗರಿಕ ಸೇವೆಯೆಡೆಗಿನ ಒಲವು ಮತ್ತು ಅರ್ಹತೆ (Aptitude)**

★ ನಾಗರಿಕ ಸೇವೆಯೆಡೆಗಿನ ಒಲವು ಮತ್ತು ನಾಗರಿಕ ಸೇವೆಯ ಮೂಲಭೂತ ಮೌಲ್ಯಗಳು, ನಾಗರಿಕ ಸೇವೆಯ ರಚನೆ, ಕಾರ್ಯಗಳು ಮತ್ತು ವಿಚಾರ ಹಾಗೂ ವರ್ತನೆಯೊಂದಿಗಿನ ಅದರ ಸಂಬಂಧಗಳು. ನೈತಿಕ ಹಾಗೂ ರಾಜಕೀಯ ಧೋರಣೆಗಳು, ಸಾಮಾಜಿಕ ಪ್ರಭಾವ ಮತ್ತು ಪುಸಲಾಯಿಸುವುದು.

★ ನಾಗರಿಕ ಸೇವೆಯೆಡೆಗಿನ ಒಲವು ಮತ್ತು ನಾಗರಿಕ ಸೇವೆಯ ಮೂಲಭೂತ ಮೌಲ್ಯಗಳು, ಭಾವನಾತ್ಮಕ ಬುದ್ಧಿಮತ್ತೆ ಮತ್ತು ಅದರ ಉಪಯೋಗಗಳು ಮತ್ತು ಆಡಳಿತದಲ್ಲಿ ಅದರ ಬಳಕೆ ಭಾರತ ಮತ್ತು ಜಗತ್ತಿನ ನೈತಿಕ ಚಿಂತಕರ ಕೊಡುಗೆಗಳು.

**ಮೇಲ್ಕಾಣಿಸಿದ ವಿಷಯಗಳ ಕುರಿತಾದ ನೈಜ ಜೀವನದ ಸಂದರ್ಭಗಳು.**

**ಪತ್ರಿಕೆ – 6 ಐಚ್ಛಿಕ ವಿಷಯ**

**ಅಭ್ಯರ್ಥಿಗಳು ಈ ಕೆಳಕಾಣಿಸಿದ ಗುಂಪು – 1 ಅಥವಾ ಗುಂಪು – 2ರಲ್ಲಿ ನಮೂದಿಸಲಾಗಿರುವ ಯಾವುದಾದರೂ ಒಂದು ವಿಷಯವನ್ನು ಮುಖ್ಯ ಪರೀಕ್ಷೆಗೆ ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳಬೇಕು.**

**ಗುಂಪು – 1**

**ಐಚ್ಛಿಕ ವಿಷಯ**

1) ಕೃಷಿ, ಕೃಷಿಮಾರುಕಟ್ಟೆ, ರೇಷ್ಮೆ ಕೃಷಿ ಮತ್ತು ಮೀನುಗಾರಿಕೆ (2) ಪಶುಸಂಗೋಪನೆ, ಪಶುವಿಜ್ಞಾನ ಮತ್ತು ಮೀನುಗಾರಿಕೆ

3) ಮಾನವ ಶಾಸ್ತ್ರ (4) ಸಸ್ಯಶಾಸ್ತ್ರ (5)ರಸಾಯನಶಾಸ್ತ್ರ (6)ಸಿವಿಲ್ ಇಂಜಿನಿಯರಿಂಗ್ (7)ವಾಣಿಜ್ಯ ಮತ್ತುಲೆಕ್ಕಪತ್ರ

8) ಅರ್ಥಶಾಸ್ತ್ರ (9)ಎಲೆಕ್ಟ್ರಿಕಲ್ ಇಂಡಿನಿಯರಿಂಗ್(10)ಭೂಗೋಳ (11) ಭೂಗರ್ಭಶಾಸ್ತ್ರ (12)ಇತಿಹಾಸ(13) ಕಾನೂನು

14) ಮ್ಯಾನೇಜ್‌ಮೆಂಟ್(15)ಗಣಿತ(16)ಮೆಕ್ಯಾನಿಕಲ್ ಇಂಜಿನಿಯರಿಂಗ್(17)ತತ್ವಶಾಸ್ತ್ರ(18)ಭೌತಶಾಸ್ತ್ರ (19)ರಾಜ್ಯಶಾಸ್ತ್ರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು (20)ಮನಃಶಾಸ್ತ್ರ (21)ಸಾರ್ವಜನಿಕ ಆಡಳಿತ (22)ಸಮಾಜಶಾಸ್ತ್ರ (23) ಸಂಖ್ಯಾಶಾಸ್ತ್ರ (24)ಪ್ರಾಣಿಶಾಸ್ತ್ರ (25)ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ